

MAG(2)PRB/CR/165/2022-23 Title code: KARKAN27951

# ಮುಂಜಾನೆ ವಾರ್ತೆ

ಇ–ಪೇಪರ್: www.munjanevarthe.com

EDITOR: H.L.AMARANATH

MUNJANE VARTHE

ಸಂಪಾದಕ: ಹೆಚ್.ಎಲ್ ಅಮರನಾಥ್ ಕನ್ನಡ ದಿನಪತ್ರಿಕೆ

VOLUME : 2 ISSUE: 116 ಸಂಪುಟ: 02 ಸಂಚಿಕೆ: 116 ಪುಟಗಳು: 04 munjanevarthe 07 FRIDAY JUNE 2024 07 ಶುಕ್ರವಾರ ಜೂನ್ 2024 ₹ 2



ಜಾಹೀರಾತಿಗಾಗಿ ಸಂಪರ್ಕಿಸಿ

9663122276

www.munjanevarthe.com


ಚೊಚ್ಚಲ ಬಾರಿಗೆ ಸಂಸತ್ ಪ್ರವೇಶ ಪಡೆದ 280 ಸಂಸದರು

ವಿವರಪುಟ 02

ಪರಿಸರ ಸಂರಕ್ಷಣೆ ಪ್ರತಿಯೊಬ್ಬ ವ್ಯಕ್ತಿಯ ಆದ್ಯ ಕರ್ತವ್ಯ

ವಿವರಪುಟ 03

ನೈಋತ್ಯ ಶಿಕ್ಷಕರ ಕ್ಷೇತ್ರದಲ್ಲಿ ಜಯಗಳಿಸಿದ ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ ಹೇಳಿಕೆ

ವಿವರಪುಟ 04

# ಅಗ್ನಿಪಥ ಯೋಜನೆ ಮರುಪರಿಶೀಲಿಸಿ

ನವದೆಹಲಿ: ಬಿಜೆಪಿ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರ ರಚನೆ ಮಾಡಲು 'ಬೇಷರತ್' ಬೆಂಬಲ ನೀಡುವುದಾಗಿ ಬಿಹಾರ ಸಿಎಂ ನಿತೀಶ್ ಕುಮಾರ್ ಮುಂದಾಳತ್ವದ ಸಂಯುಕ್ತ ಜನತಾ ದಳ (ಜೆಡಿಯು) ಘೋಷಿಸಿದ್ದರೂ, ಹಲವು ಬೇಡಿಕೆಗಳನ್ನು ಮುಂದಿಟ್ಟಿದೆ. ಅಗ್ನಿಪಥ್ ಯೋಜನೆ ಮರುಪರಿಶೀಲನೆ, ಜಾತಿ ಗಣತಿ ಮುಂದುವರಿಕೆ, ಬಿಹಾರ ರಾಜ್ಯಕ್ಕೆ ವಿಶೇಷ ಸ್ಥಾನಮಾನದಂತಹ ಬೇಡಿಕೆಗಳನ್ನು ಸಲ್ಲಿಸಿದೆ.



ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಜೆಡಿಯು ನಾಯಕ ಕೆ.ಸಿ. ತ್ಯಾಗಿ, ಅಗ್ನಿಪಥ ಯೋಜನೆಯನ್ನು ಮರುಪರಿಶೀಲನೆ ಮಾಡಬೇಕು ಎಂದು ತಮ್ಮ ಪಕ್ಷವು ಒತ್ತಾಯಿಸಿದೆ. ಜಾತಿ ಗಣತಿಯನ್ನು ಮುಂದುವರಿಸಬೇಕು. ಅದರ ಹೊರತಾಗಿ ಬಿಜೆಪಿಗೆ ನಮ್ಮ ಪಕ್ಷವು ಬೇಷರತ್ ಬೆಂಬಲ ನೀಡಲಿದೆ ಎಂದು ಹೇಳಿದರು. ಅಗ್ನಿವೀರ್ ಬಗ್ಗೆ ಜನರಲ್ಲಿ ಅಸಮಾಧಾನ: ಸೇನೆಗೆ ಯುವಕರನ್ನು ಅಲ್ಪಾವಧಿಗೆ ಆಯ್ಕೆ ಮಾಡುವ ಅಗ್ನಿವೀರ್ ಯೋಜನೆಯ ಬಗ್ಗೆ ಮತದಾರರಲ್ಲಿ ಕೋಪವಿದೆ. ಈ ನ್ಯೂನತೆಯನ್ನು ತೆಗೆದುಹಾಕಲು ಜೆಡಿಯು ಬಯಸುತ್ತದೆ. ಜನರು ಹೆಚ್ಚಾಗಿ ಆಕ್ಷೇಪಣೆ ಹೊಂದಿರುವ ಯೋಜನೆಯನ್ನು ಮರು ವಿಮರ್ಶೆ ಮಾಡುವುದೇ ಉತ್ತಮ ಎಂದು ಸುದ್ದಿಗಾರರಿಗೆ ತಿಳಿಸಿದರು. ಏಕರೂಪ ನಾಗರಿಕ ಸಂಹಿತೆಗೆ (ಯುಸಿಸಿ) ವಿರೋಧ ವ್ಯಕ್ತಪಡಿಸಿಲ್ಲ. ಆದರೆ, ಈ ಬಗ್ಗೆ ಕೂಟದ ಎಲ್ಲ ಪಕ್ಷಗಳೊಂದಿಗೆ ಮಾತುಕತೆ ನಡೆಸಬೇಕು. ಯುಸಿಸಿ ಕುರಿತು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಕಾನೂನು ಆಯೋಗಕ್ಕೆ ಪತ್ರ ಬರೆದಿದ್ದಾರೆ. ಆದರೆ, ಯುಸಿಸಿ ವಿರುದ್ಧ ಅಲ್ಲ. ಮುಖ್ಯಮಂತ್ರಿಗಳು, ರಾಜಕೀಯ ಪಕ್ಷಗಳು ಮತ್ತು ವಿವಿಧ ಪಂಗಡಗಳೊಂದಿಗೆ ಸಮಾಲೋಚನೆ ನಡೆಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕು ಎಂದರು. ಜಾತಿ ಗಣತಿ ಬಗ್ಗೆ ಪ್ರತಿಕ್ರಿಯಿಸಿದ ಅವರು, ದೇಶದ ಯಾವ ಪಕ್ಷವೂ ಜಾತಿ ಗಣತಿಯನ್ನು ನಿರಾಕರಿಸಿಲ್ಲ. ಬಿಹಾರದಲ್ಲಿ ಮೊದಲಿಗೆ ಗಣತಿ ನಡೆಸಲಾಯಿತು. ಪ್ರಧಾನಿ ಮೋದಿ ಅವರೂ ಇದನ್ನು ವಿರೋಧಿಸಲಿಲ್ಲ. ಇದು ಈಗಿನ ಬೇಡಿಕೆಯಾಗಿದೆ. ನಾವು ಅದನ್ನು ಮುಂದುವರಿಸಲು ಬಯಸುತ್ತೇವೆ ಎಂದು ತ್ಯಾಗಿ ಹೇಳಿದರು.

ಬಿಹಾರಕ್ಕೆ ವಿಶೇಷ ಸ್ಥಾನಮಾನ: ಇನ್ನು, ಬಿಹಾರ ರಾಜ್ಯವಾಗಿ ವಿಭಜನೆಯಾದ ನಂತರ ಹಲವು ಸಂಕಷ್ಟಗಳನ್ನು ಎದುರಿಸಿದೆ. ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡಬೇಕು ಎಂಬುದು ಹಲವು ವರ್ಷಗಳ ಬೇಡಿಕೆಯಾಗಿದೆ. ಇದು ನಮ್ಮ ಹೃದಯ ಮತ್ತು ಮನಸ್ಸಿನಲ್ಲಿರುವ ಆಸೆಯಾಗಿದೆ. ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಮನವಿ ಸಲ್ಲಿಸಲಾಗುವುದು. ನಮ್ಮ ಪಕ್ಷ ಎನ್?ಡಿಎ ಕೂಟದಲ್ಲಿ ಇರುವ ಕಾರಣ, ಯಾವುದೇ ಪೂರ್ವ ಷರತ್ತಿಲ್ಲದೇ, ಬೇಷರತ್ ಬೆಂಬಲ ನೀಡಲಿದೆ ಎಂದರು.

18ನೇ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತ ಸಿಗದ ಕಾರಣ, ಜೆಡಿಯು, ಟಿಡಿಪಿಯಂತಹ ಮಿತ್ರಪಕ್ಷಗಳ ಬೆಂಬಲ ನಿರ್ಣಾಯಕವಾಗಿದೆ. ಸದ್ಯ ಬಿಜೆಪಿ 240 ಸ್ಥಾನಗಳನ್ನು ಗಳಿಸಿದ್ದು, ಪೂರ್ಣ ಬಹುಮತಕ್ಕೆ 32 ಸ್ಥಾನಗಳ ಕೊರತೆ ಹೊಂದಿದೆ. ಮಿತ್ರಪಕ್ಷಗಳಾದ ಮಾಜಿ ಸಿಎಂ ಎನ್.ಚಂದ್ರಬಾಬು ನಾಯ್ಡು ಅವರ ತೆಲುಗು ದೇಶಂ ಪಕ್ಷ (ಟಿಡಿಪಿ) 16, ನಿತೀಶ್‌ಕುಮಾರ್ ಅವರ ಜೆಡಿಯು 12 ಸ್ಥಾನಗಳಲ್ಲಿ ಗೆದ್ದಿದ್ದು, ಇತರ ಮೈತ್ರಿ ಪಾಲುದಾರರು ಸೇರಿ ಎನ್‌ಡಿಎ 293 ಸ್ಥಾನಗಳನ್ನು ಹೊಂದಿದೆ. ಇದೀಗ ಪಕ್ಷೇತರರೂ ಎನ್‌ಡಿಎ ಬೆಂಬಲ ಘೋಷಿಸಿದ್ದು, ಕೂಟದ ಬಲ 303ಕ್ಕೆ ಏರಿದೆ.

# ಎನ್‌ಡಿಎ ಸರ್ಕಾರ ರಚನೆ ಕಸರತ್ತು

ನವದೆಹಲಿ: ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ನಾಯಕರಾಗಿ ನರೇಂದ್ರ ಮೋದಿ ಆಯ್ಕೆಯಾಗಿದ್ದಾರೆ. ಪ್ರಮುಖ ಪಕ್ಷಗಳಾದ ಟಿಡಿಪಿ, ಜೆಡಿಯು ಸೇರಿದಂತೆ ಮಿತ್ರಪಕ್ಷಗಳು ತಮ್ಮ ಬೆಂಬಲದ ಪತ್ರ ನೀಡಿವೆ. ಹೊಸ ಸರ್ಕಾರ ರಚನೆಗೆ ಜೂನ್ 7ರಂದು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಹಕ್ಕು ಮಂಡಿಸುವ ಸಾಧ್ಯತೆ ಇದೆ.

ಮೋದಿ ನಿವಾಸದಲ್ಲಿ ಗುರುವಾರ ಸಂಜೆ ಮೈತ್ರಿಕೂಟದ ಮಹತ್ವದ ಸಭೆ ನಡೆಯಿತು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಹಿರಿಯ ನಾಯಕರಾದ ಅಮಿತ್ ಶಾ, ರಾಜನಾಥ್ ಸಿಂಗ್ ಹಾಗೂ ಜೆಡಿಯು ನಾಯಕ ನಿತೀಶ್‌ಕುಮಾರ್, ಟಿಡಿಪಿ ನಾಯಕ ಚಂದ್ರಬಾಬು ನಾಯ್ಡು, ಶಿವಸೇನೆ ನಾಯಕ ಏಕನಾಥ್ ಶಿಂಧೆ, ಜೆಡಿಎಸ್ ನಾಯಕ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಪ್ರಮುಖರು ಪಾಲ್ಗೊಂಡಿದ್ದರು.

ಜೊತೆಗೆ, ಜನಸೇನಾ ಪಕ್ಷದ ನಾಯಕ ಪವನ್ ಕಲ್ಯಾಣ್, ಲೋಕ ಜನಶಕ್ತಿ ಪಕ್ಷದ (ರಾಮ್ ವಿಲಾಸ್) ನಾಯಕ ಚಿರಾಗ್ ಪಾಸ್ವಾನ್, ಎನ್?ಸಿಪಿ (ಅಜಿತ್ ಪವಾರ್ ಬಣ) ನಾಯಕ ಪ್ರಫುಲ್ ಪಟೇಲ್ ಸೇರಿ ಇತರರು ಉಪಸ್ಥಿತರಿದ್ದರು. ಈ ಸಭೆಯಲ್ಲಿ ಎನ್‌ಡಿಎ ಮೈತ್ರಿಕೂಟದ ನಿರ್ಣಯವನ್ನೂ ಅಂಗೀಕರಿಸಲಾಗಿದೆ.

"2024ರ ಲೋಕಸಭೆ ಚುನಾವಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಎನ್‌ಡಿಎ ಒಗ್ಗಟ್ಟಿನಿಂದ ಹೋರಾಡಿ ಗೆಲುವು ಸಾಧಿಸಿರುವುದು ನಮಗೆಲ್ಲರಿಗೂ ಹೆಮ್ಮೆ ತಂದಿದೆ. ನಾವೆಲ್ಲ ಎನ್‌ಡಿಎ ನಾಯಕರು ನರೇಂದ್ರ ಮೋದಿ ಅವರನ್ನು ನಮ್ಮ ನಾಯಕರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡುತ್ತೇವೆ" ಎಂದು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

"ಬಡವರು, ಮಹಿಳೆಯರು, ಯುವಕರು, ರೈತರು ಮತ್ತು ಸಮಾಜದ ವಂಚಿತ ವರ್ಗಗಳ ಸೇವೆಗೆ ಸರ್ಕಾರ ಬದ್ಧವಾಗಿದೆ. ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ಜನಪರ ನೀತಿಗಳಿಂದಾಗಿ ಕಳೆದ 10 ವರ್ಷಗಳಲ್ಲಿ ದೇಶವು ಪ್ರತಿಯೊಂದು ಕ್ಷೇತ್ರದಲ್ಲೂ



ಅಭಿವೃದ್ಧಿಯಾಗುತ್ತಿರುವುದನ್ನು ಜನರು ನೋಡಿದ್ದಾರೆ" ಎಂದೂ ನಿರ್ಣಯದಲ್ಲಿ ಹೇಳಲಾಗಿದೆ.

ಮಂಗಳವಾರ ಪ್ರಕಟವಾದ ಲೋಕಸಭೆ ಚುನಾವಣೆಯಲ್ಲಿ 293 ಸ್ಥಾನಗಳಲ್ಲಿ ಗೆಲುವು ಮೂಲಕ ಎನ್?ಡಿಎ ಮೈತ್ರಿಕೂಟವು ಸರಳ ಬಹುಮತವನ್ನು ಪಡೆದಿದೆ. ಈ ಮೂಲಕ 1962ರ ಮೊದಲ ಬಾರಿಗೆ ಸತತವಾಗಿ ಮೂರನೇ ಬಾರಿಗೆ ಮೋದಿ ನೇತೃತ್ವದಲ್ಲಿ ಅಧಿಕಾರಕ್ಕೆ ಎನ್?ಡಿಎ ಬರಲು ಸಜ್ಜಾಗಿದೆ. ಈಗ ಹೊಸ ಸರ್ಕಾರ ರಚನೆ ಕಸರತ್ತು ಆರಂಭಿಸಿದ್ದು, ಜೂನ್? 8ರಂದು ಪ್ರಧಾನಿ ಹಾಗೂ ನೂತನ ಸಚಿವರ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ನಡೆಯುವ ನಿರೀಕ್ಷೆ ಇದೆ.

# ವಿಪಕ್ಷಗಳ ಮೈತ್ರಿಕೂಟದ ಮಹತ್ವದ ಸಭೆ



ನವದೆಹಲಿ: ಲೋಕಸಭೆ ಚುನಾವಣೆ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ರಾಷ್ಟ್ರ ರಾಜಕಾರಣದಲ್ಲಿ ರಾಜಕೀಯ ಪಕ್ಷಗಳ ಚಟುವಟಿಕೆಗಳು ಬಿರುಸುಗೊಂಡಿದೆ. ಬಿಜೆಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ, ತನ್ನ ಎನ್‌ಡಿಎ ಮೈತ್ರಿಕೂಟವನ್ನು ಆಶ್ರಯಿಸುವುದು ಅನಿವಾರ್ಯವಾಗಿದೆ. ನಿರೀಕ್ಷೆಯಂತೆ ಬಿಜೆಪಿ ತನ್ನ ಮಿತ್ರಪಕ್ಷಗಳ ಶಕ್ತಿ ಪ್ರದರ್ಶನ ನಡೆಸಿ, ಸರ್ಕಾರ ರಚನೆ ಕರಸತ್ತು ಆರಂಭಿಸಿದೆ. ಮತ್ತೊಂದೆಡೆ, ಎರಡನೇ ಅತಿದೊಡ್ಡ ಪಕ್ಷದ ಸ್ಥಾನ ಪಡೆದಿರುವ ಕಾಂಗ್ರೆಸ್ ಸಹ ತನ್ನದೇ ರೀತಿಯಲ್ಲಿ ಗುದ್ದುಗೆ ಕರಸತ್ತು ಶುರು ಮಾಡಿದೆ. ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿಂದು 'ಇಂಡಿ' ಮೈತ್ರಿಕೂಟದ ನಾಯಕರು ಮಹತ್ವದ ಸಭೆ ಸೇರಿದರು. ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ಪಕ್ಷದ ಮಾಜಿ ಅಧ್ಯಕ್ಷ ರಾಹುಲ್‌ಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ಪ್ರಮುಖ ಮಿತ್ರಪಕ್ಷಗಳಾದ ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್, ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ, ಡಿಎಂಕೆ ನಾಯಕ ಎಂ.ಕೆ.ಸ್ಟಾಲಿನ್, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಎನ್‌ಸಿಪಿ ನಾಯಕ ಶರದ್ ಪವಾರ್, ಶಿವಸೇನೆ ನಾಯಕ ಸಂಜಯ್ ರಾವುತ್, ಆಮ್ ಆದ್ಮಿ ಪಕ್ಷದ ಸಂಜಯ್‌ಸಿಂಗ್, ರಾಘವ್ ಚಡ್ಡಾ, ಸಿಪಿಎಂ ನಾಯಕರಾದ ಸೀತಾರಾಂ ಯೆಚೂರಿ, ಸೇರಿದಂತೆ ಭಾಗವಹಿಸಿದ್ದರು.

ಕೈ ಜೋಡಿಸಲು ಇತರ ಪಕ್ಷಗಳಿಗೆ ಖರ್ಗೆ ಕರೆ: ಮೈತ್ರಿಕೂಟದ ಸಭೆಯಲ್ಲಿ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷ ಖರ್ಗೆ, ಈ ಚುನಾವಣೆಯಲ್ಲಿ ಎಲ್ಲ 'ಇಂಡಿಯಾ'ದ ಪಾಲುದಾರ ಪಕ್ಷಗಳು ಉತ್ತಮವಾಗಿ, ಒಗ್ಗಟ್ಟಿನಿಂದ ಮತ್ತು ದೃಢವಾಗಿ ಹೋರಾಡಿವೆ. ಸಂವಿಧಾನದ ಪೀಠಿಕೆಯಲ್ಲಿ ಪ್ರತಿಪಾದಿಸಿರುವ ಮೌಲ್ಯಗಳಿಗೆ ಮೂಲಭೂತ ಬದ್ಧತೆಯನ್ನು ಹೊಂದಿರುವ ಎಲ್ಲ ಪಕ್ಷಗಳನ್ನು 'ಇಂಡಿಯಾ' ಬಣವು ಸ್ವಾಗತಿಸುತ್ತದೆ ಎಂದು ತಿಳಿಸಿದ್ದಾರೆ. "ಜನಾದೇಶವು ಪ್ರಮುಖವಾಗಿ ಮೋದಿಯವರ ವಿರುದ್ಧವಾಗಿದೆ. ಜೊತೆಗೆ ಮೋದಿ ರಾಜಕೀಯದ ವಸ್ತು ಮತ್ತು ಶೈಲಿಯ ವಿರುದ್ಧವಾಗಿದೆ. ಇದು ಸ್ಪಷ್ಟ ನೈತಿಕ ಸೋಲನ್ನು ಹೊರತುಪಡಿಸಿ ವೈಯಕ್ತಿಕವಾಗಿ ಅವರಿಗೆ ದೊಡ್ಡ ರಾಜಕೀಯ ನಷ್ಟವಾಗಿದೆ. ಆದಾಗ್ಯೂ, ಜನಾದೇಶವನ್ನು ಮೋದಿ ಬುಡಮೇಲು ಮಾಡಲು ಮುಂದಾಗಿದ್ದಾರೆ. ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಪ್ರತಿಪಾದಿಸಲಾದ ಮೌಲ್ಯಗಳಿಗೆ ಮತ್ತು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ನ್ಯಾಯಕ್ಕಾಗಿ ತನ್ನ ಮೂಲಭೂತ ಬದ್ಧತೆಯನ್ನು ಹಂಚಿಕೊಳ್ಳುವ ಎಲ್ಲ ಪಕ್ಷಗಳಿಗೆ ಸ್ವಾಗತವಿದೆ" ಎಂದು ಖರ್ಗೆ ಹೇಳಿದ್ದಾರೆ. ಈ ಮೂಲಕ ಬಿಜೆಪಿಯ ಮೈತ್ರಿಪಕ್ಷಗಳಿಗೂ ಪರೋಕ್ಷವಾದ ಆಹ್ವಾನ ನೀಡಿದ್ದಾರೆ.

# ಮುಂದಿನ 24 ಗಂಟೆಗಳಲ್ಲಿ ಭಾರಿ ಮಳೆ ಸಾಧ್ಯತೆ!

ಬೆಂಗಳೂರು: ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಮುಂದಿನ 24 ಗಂಟೆ ಭರ್ಜರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಚಾಮರಾಜನಗರ, ಮಂಡ್ಯ, ಮೈಸೂರು & ಉಡುಪಿ, ಮಂಗಳೂರು, ಉತ್ತರ ಕನ್ನಡ, ತುಮಕೂರು, ಹಾಸನ, ಚಿತ್ರದುರ್ಗ, ಬೆಳಗಾವಿ, ದಾವಣಗೆರೆ, ಬಳ್ಳಾರಿ, ಬೆಂಗಳೂರು ನಗರ, ವಿಜಯಪುರ, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ, ಕೋಲಾರದಲ್ಲಿ ಭಾರಿ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಮುಂದಿನ ಐದು ದಿನಗಳ ಕಾಲ ಕರ್ನಾಟಕದ ಕೆಲವು ಭಾಗಗಳಲ್ಲಿ ಗುಡುಗು, ಮಿಂಚು ಮತ್ತು ಬಿರುಗಾಳಿಯ ಗಾಳಿಯೊಂದಿಗೆ ಮಳೆಯಾಗುವ ಸಾಧ್ಯತೆದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.




ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...

www.munjanevarthe.com

ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುಗುವುದು ಈಗ ಮತ್ತಷ್ಟು ಸುಲಭ

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಶುಕ್ರವಾರ 07 ಜೂನ್ 2024
Friday 07 June 2024

# ಚೊಚ್ಚಲ ಬಾರಿಗೆ ಸಂಸತ್ ಪ್ರವೇಶ ಪಡೆದ 280 ಸಂಸದರು

ನವದೆಹಲಿ: 18ನೇ ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎ ಕೂಟದ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಿದ್ದು, ಬಿಜೆಪಿ ಸೇರಿದಂತೆ ಯಾವುದೇ ಪಕ್ಷಕ್ಕೆ ಪೂರ್ಣ ಬಹುಮತ ಸಿಕ್ಕಿಲ್ಲ. ಮತದಾರ ಪ್ರಭುಗಳು ನರೇಂದ್ರ ಮೋದಿ ಅವರ ವರ್ಚಸ್ಸಿನ ನಡುವೆಯೂ ಕಮಲ ಪಕ್ಷವನ್ನು ಏಕಾಂಗಿಯಾಗಿ ಬೆಂಬಲಿಸಿಲ್ಲ.

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ರಚನೆ ಮಾಡಲು ಮುಂದಾಗಿದೆ. ಅಚ್ಚರಿಯ ಬೆಳವಣಿಗೆಯಲ್ಲಿ ಈ ಬಾರಿಯ ಸಂಸತ್ತಿಗೆ 280 ಮಂದಿ ಹೊಸ ಸಂಸದರು ಆಯ್ಕೆಯಾಗಿರುವುದು ವಿಶೇಷವಾಗಿದೆ. ಇದು ಕಳೆದ ಬಾರಿಗಿಂತಲೂ ಹೆಚ್ಚಾಗಿದೆ. ಕಳೆದ ಬಾರಿ 267 ಮಂದಿ ಮೊದಲ ಚುನಾವಣೆಯಲ್ಲೇ ಗೆದ್ದಿದ್ದರು.

ಉತ್ತರಪ್ರದೇಶದಲ್ಲಿ ಹೆಚ್ಚು: ಉತ್ತರಪ್ರದೇಶ ರಾಜ್ಯದಿಂದ ಅತಿಹೆಚ್ಚು ಅಭ್ಯರ್ಥಿಗಳು ಇದೇ ಮೊದಲ ಬಾರಿಗೆ ಸಂಸತ್ ಪ್ರವೇಶಿಸಲಿದ್ದಾರೆ. ಅಂದರೆ, ಇಲ್ಲಿ 80 ಲೋಕಸಭಾ ಸೀಟುಗಳ ಪೈಕಿ 45 ಮಂದಿ ಪ್ರಥಮ ಬಾರಿಗೆ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಪಡೆದಿದ್ದಾರೆ. ಹೊಸ ಸಂಸದರಲ್ಲಿ ಮಾಜಿ ಮುಖ್ಯಮಂತ್ರಿಗಳು, ಸಿನಿಮಾ ತಾರೆಯರು, ರಾಜಕೀಯ ಮುಖಂಡರು ಮತ್ತು ಹೈಕೋರ್ಟ್ ಮಾಜಿ ನ್ಯಾಯಾಧೀಶರು ಕೂಡ ಇದ್ದಾರೆ.

ಅತಿದೊಡ್ಡ ರಾಜ್ಯವಾದ ಉತ್ತರ ಪ್ರದೇಶದ ಮೀರತ್ ಲೋಕಸಭಾ ಕ್ಷೇತ್ರದಿಂದ ಧಾರಾವಾಹಿಯಲ್ಲಿ ರಾಮನ ಪಾತ್ರದಲ್ಲಿ ನಟಿಸಿದ್ದ ಅರುಣ್ ಗೋವಿಲ್ ಅವರು ಜಯ ಸಾಧಿಸಿದ್ದಾರೆ. ರಾಹುಲ್ ಗಾಂಧಿ ಬದಲಿಗೆ ಕೇಂದ್ರ ಸಚಿವೆ ಸ್ಮೃತಿ ಇರಾನಿ ವಿರುದ್ಧ ಕಣಕ್ಕಿಳಿದಿದ್ದ ಕಾಂಗ್ರೆಸ್ ನಾಯಕ ಕಿಶೋರಿ ಲಾಲ್ ಶರ್ಮಾ ಅವರು ಗೆಲುವು ಪಡೆದಿದ್ದಾರೆ. ದಲಿತ ಹಕ್ಕುಗಳ ಕಾರ್ಯಕರ್ತ ಚಂದ್ರಶೇಖರ್ ಆಜಾದ್ ಆಜಾದ್ ಅವರು ನಗೀನಾ ಲೋಕಸಭಾ ಕ್ಷೇತ್ರದಲ್ಲಿ ಸಮಾಜವಾದಿ ಪಕ್ಷದ ಅಭ್ಯರ್ಥಿಯನ್ನು ಸೋಲಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಬಿಜೆಪಿಗೆ ಕಡಿಮೆ



ಸೀಟು ಬಂದಿದ್ದರೂ 33 ಮಂದಿ ಇದೇ ಮೊದಲ ಬಾರಿಗೆ ಸಂಸತ್ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಎನ್‌ಸಿಪಿಯಿಂದ ದಿಂಡೋರಿ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಶಾಲಾ ಶಿಕ್ಷಕ ಭಾಸ್ಕರ್ ಭಾಗೆ ಅವರು ಬಿಜೆಪಿ ನಾಯಕಿ ಭಾರತಿ ಪವಾರ್ ಅವರನ್ನು ಸೋಲಿಸಿದ್ದಾರೆ.

ಮುಂಬೈ ಉತ್ತರ ಕ್ಷೇತ್ರದಿಂದ ಚುನಾಯಿತರಾದ ಬಿಜೆಪಿಯ ಪಿಯೂಷ್ ಗೋಯಲ್, ಅಮರಾವತಿ ಕ್ಷೇತ್ರದಲ್ಲಿ ಹಿಂದು ಫೈರ್‌ಬ್ರ್ಯಾಂಡ್ ಬಿಜೆಪಿಯ ನವನೀತ್ ರಾಣಾ ಅವರನ್ನು ಸೋಲಿಸಿದ ಕಾಂಗ್ರೆಸ್ ನಾಯಕ ಬಲ್ವಂತ್ ವಾಂಖೆಡೆ, ಅಕೋಲಾದಲ್ಲಿ ಬಿಜೆಪಿಯ ಅನೂಪ್ ಧೋತ್ರೆ, ಸಾಂಗ್ಲಿ ಕ್ಷೇತ್ರದಲ್ಲಿ ಕಣಕ್ಕಿಳಿದಿದ್ದ ಸ್ವತಂತ್ರ ಅಭ್ಯರ್ಥಿ ವಿಶಾಲ್ ಪಾಟೀಲ್ ಅವರು ಮೊದಲ ಬಾರಿಗೆ ಚುನಾಯಿತರಾಗಿದ್ದಾರೆ.

ಆಯ್ಕೆಯಾದ ಮಾಜಿ ಸಿಎಂಗಳು: ದೇಶದಲ್ಲಿ 8 ಮಂದಿ ಮಾಜಿ ಸಿಎಂಗಳು ಲೋಕಸಭೆಗೆ ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ. ಮಹಾರಾಷ್ಟ್ರದ ರತ್ನಗಿರಿ-ಸಿಂಧುದುರ್ಗ ಕ್ಷೇತ್ರದ ನಾರಾಯಣ ರಾಣೆ, ಉತ್ತರಾಖಂಡದ ಹರಿದ್ವಾರ ಲೋಕಸಭಾ ಕ್ಷೇತ್ರದಿಂದ ತ್ರಿವೇಂದ್ರ ಸಿಂಗ್ ರಾವತ್, ಹರ್ಯಾಣದ ಕರ್ನಾಲ್‌ನಿಂದ ಮನೋಹರ್ ಲಾಲ್, ತ್ರಿಪುರಾ ಪಶ್ಚಿಮ ಕ್ಷೇತ್ರದಿಂದ ಬಿಪ್ಲಬ್ ಕುಮಾರ್ ದೇಬ್, ಬಿಹಾರದ ಗಯಾದಿಂದ ಜಿತನ್ ರಾಮ್ ಮಾಂಝಿ, ಕರ್ನಾಟಕದ ಹಾವೇರಿಯಿಂದ ಬಸವರಾಜ ಬೊಮ್ಮಾಯಿ, ಬೆಳಗಾವಿ ಕ್ಷೇತ್ರದಿಂದ ಜಗದೀಶ್ ಶೆಟ್ಟರ್, ಪಂಜಾಬ್‌ನ ಜಲಂಧರ್‌ನಿಂದ ಚರಂಜಿತ್ ಸಿಂಗ್ ಚನ್ನಿ ಲೋಕಸಭೆಗೆ ಮೊದಲ ಸಲ ಪ್ರವೇಶ ಪಡೆದಿದ್ದಾರೆ.

ಕೇರಳದಲ್ಲಿ ಮೊದಲ ಬಾರಿಗೆ ಬಿಜೆಪಿ ಬಾವುಟ ಹಾರಿಸಿದ ನಟ ಸುರೇಶ್ ಗೋಪಿ ಅವರು ತ್ರಿಶೂರ್‌ನಿಂದ ಆಯ್ಕೆಯಾದರೆ, ಬಾಲಿವುಡ್ ನಟಿ ಕಂಗನಾ ರಣಾವತ್ ಹಿಮಾಲಚಪ್ರದೇಶದ ಮಂಡಿ ಕ್ಷೇತ್ರದಿಂದ ಮೊದಲ ಬಾರಿಗೆ ಅವಕಾಶ ಪಡೆದಿದ್ದಾರೆ.

ರಾಜ್ಯಸಭಾ ಸದಸ್ಯರಾಗಿರುವ ಅನಿಲ್ ದೇಸಾಯಿ, ಭೂಪೇಂದ್ರ ಯಾದವ್, ಧರ್ಮೇಂದ್ರ ಪ್ರಧಾನ್, ಮನ್ಸುಖ್ ಮಾಂಡವಿಯಾ ಮತ್ತು ಪರ್ಷೋತ್ತಮ್ ರೂಪಾಲಾ ಅವರು ಕೂಡ ಲೋಕಸಭೆಗೆ ಚೊಚ್ಚಲ ಪ್ರವೇಶ ಮಾಡಿದ್ದಾರೆ.

ರಾಜಮನೆತನಗಳ ಅಭ್ಯರ್ಥಿಗಳು: ಹಿಂದಿನ ರಾಜಮನೆತನದ ಸದಸ್ಯರಾದ ಛತ್ರಪತಿ ಶಾಹು (ಕೊಲ್ಹಾಪುರ), ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ (ಮೈಸೂರು), ಮತ್ತು ಕೃತಿ ದೇವಿ ದೆಬ್ಬರ್ಮನ್ (ತ್ರಿಪುರಾ ಪೂರ್ವ) ಅವರು ಕೂಡ ಆಯ್ಕೆಯಾಗಿದ್ದಾರೆ.

ಇನ್ನು ಪಶ್ಚಿಮಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಅವರ ಸವಾಲು ಸ್ವೀಕರಿಸಿ ರಾಜಕೀಯಕ್ಕೆ ಧುಮುಕಿರುವ ಕೋಲ್ಕತ್ತಾ ಹೈಕೋರ್ಟ್‌ನ ಮಾಜಿ ನ್ಯಾಯಾಧೀಶ ಅಭಿಜಿತ್ ಗಂಗೋಪಾಧ್ಯಾಯ ಅವರು ತಾಲ್ಲುಕ್ ಲೋಕಸಭಾ ಕ್ಷೇತ್ರದಿಂದ ಗೆದ್ದು ಮೊದಲ ಬಾರಿಗೆ ಸಂಸದರಾಗಿದ್ದಾರೆ.

# ಪರಿಸರ ಸಂರಕ್ಷಣೆ ನಮ್ಮೆಲ್ಲರಾ ಹೊಣೆ:- ಗುಂಡಪ್ಪ.ಬಿ.ವಿ




ಕೊರಟಗೆರೆ:- ಪ್ರತಿಯೊಬ್ಬರು ಪರಿಸರ ಅಭಿವೃದ್ಧಿಗೆ ಗಿಡ-ಮರಗಳನ್ನು ಪೋಷಿಸಿ ಬೆಳೆಸುವುದು ಆರೋಗ್ಯಕರ ಬೆಳವಣಿಗೆಗೆ ಉಪಯುಕ್ತವಾಗಿದೆ. ಆದ್ದರಿಂದ ಮನೆಗೊಂದು ಮರ ಇರಬೇಕಾಗಿದೆ. ಆದ್ದರಿಂದ ಮಳೆಗಾಲದಲ್ಲಿ ಸಸಿಗಳನ್ನು ನೆಟ್ಟರೆ ಅದು ಮರವಾಗಿ ಬೆಳೆದು ಆಕ್ಸಿಜನ್ ನೀಡುತ್ತದೆ. ಮತ್ತು ಓಜೋನ್ ಪರದೆ ರಕ್ಷಣೆಗೆ ಸಹಕಾರಿಯಾಗಿರುತ್ತದೆ ಎಂದು ಗುಬ್ಬಿ ತಾಲೂಕಿನ ಸರ್ಕಾರಿ ಪಿಯು ಕಾಲೇಜಿನ ನಿವೃತ್ತ ಶಿಕ್ಷಕ ಹಾಗೂ ಹಸಿರು ಶಿಕ್ಷಕ ಖ್ಯಾತಿಯ ಗುಂಡಪ್ಪ ಬಿ.ವಿ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಐಕ್ಯೂಎಸಿ ಸಹಯೋಗದೊಂದಿಗೆ ಅರ್ಥಶಾಸ್ತ್ರ ಮತ್ತು ಎನ್‌ಎಸ್‌ಎಸ್ ವಿಭಾಗ ವತಿಯಿಂದ ಆಯೋಜಿಸಲಾದ ವಿಶ್ವ ಪರಿಸರ ದಿನಾಚಣೆಯ ಕಾರ್ಯಕ್ರಮದಲ್ಲಿ ಸಸಿ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿ, ಓಜೋನ್ ಪರದೆಯ ರಕ್ಷಣೆಯಿಂದ ಸಹಕಾರಿಯಾಗುವುದಲ್ಲದೇ ಅದು ಅನೇಕ ರೋಗಗಳಿಗೆ ರಾಮಬಾಣವಾಗಿದೆ. ಆದ್ದರಿಂದ ಪರಿಸರ ಸಂರಕ್ಷಣೆ ಹೊಣೆ ನಮ್ಮೆಲ್ಲರಾ ಜವಬ್ದಾರಿಯಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಪ್ರಾಂಶುಪಾಲ ಈರಪ್ಪನಾಯ್ಕ ಮಾತನಾಡಿ, ಮನುಷ್ಯರು ತಮ್ಮ ಸ್ವಾರ್ಥಕ್ಕೆ ಅರಣ್ಯ ನಾಶ ಮಾಡುತ್ತಿದ್ದಾರೆ. ಇದರಿಂದ ಸರಿಯಾದ ಸಮಯಕ್ಕೆ ಮಳೆಯಾಗದೆ ಹಲವು ಪ್ರಾಕೃತಿಕ ವಿಕೋಪಗಳು ಸಂಭವಿಸುತ್ತಿವೆ. ಇದು ಹೀಗೆ ಮುಂದುವರೆದರೆ ಮುಂದೊಂದು ದಿನ ಇಡೀ ಸಮಾಜವೇ ನಾಶವಾಗಲಿದೆ ಎಂದು ಆತಂಕವನ್ನು ವ್ಯಕ್ತಪಡಿಸಿದರು.

ಪ್ರಥಮ ಬಿಎ ಮತ್ತು ಎಂಎ ಅರ್ಥಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ವಿವಿಧ ರೀತಿಯಲ್ಲಿ ಪರಿಸರ ದಿನಾಚರಣೆಗೆ ಶ್ರಮಿಸಿದರು.

ಐಕ್ಯೂಎಸಿ ವಿಭಾಗದ ಡಾ.ದೀಪಾ ಮರಗಳಿಂದಾಗುವ 35ಕ್ಕೂ ಹೆಚ್ಚಿನ ಪ್ರಯೋಜನಗಳನ್ನು ತಿಳಿಸಿದರು. ಪ್ರೊಫೆಸರ್ ರೂಪ ಪ್ರಾಸ್ತಾವಿಕ ನುಡಿಗಳ್ನಾಡಿದರು. ಸಂಪನ್ಮೂಲ ವ್ಯಕ್ತಿಗಳನ್ನು ಕಾರ್ಯಕ್ರಮದಲ್ಲಿ ವಿಶೇಷವಾಗಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಸ್ನಾತಕೋತ್ತರ ವಿಭಾಗದ ಸಂಚಾಲಕ ಡಾ.ಎಂ ತಿಪೇಸ್ವಾಮಿ, ಡಾ.ಶಿವಪ್ಪ, ಎನ್‌ಎಸ್‌ಎಸ್ ಕಾರ್ಯಕ್ರಮದ ಅಧಿಕಾರಿ ವೆಂಕಟೇಶ್, ಡಾ.ಲೋಕೇಶ್ ನಾಯ್ಕ, ಶಿವರಾಮಯ್ಯ, ಸೌಭಾಗ್ಯ, ಬಿ.ಸಿ ರಂಗನಾಥಮೂರ್ತಿ ಸೇರಿದಂತೆ ಇತರರು ಇದ್ದರು.

# ಸಾರ್ವಜನಿಕರು ಸಣ್ಣ-ಪುಟ್ಟ ಕಾಯಿಲೆಗಳನ್ನು ನಿರ್ಲಕ್ಷಿಸದೇ, ಆರೋಗ್ಯ ತಪಾಸಣೆ ಮಾಡಿಕೊಳ್ಳುವುದು ಅಗತ್ಯ

ಕೆ.ಆರ್.ಪೇಟೆ: ಸಾರ್ವಜನಿಕರು ಸಣ್ಣ-ಪುಟ್ಟ ಕಾಯಿಲೆಗಳನ್ನು ನಿರ್ಲಕ್ಷಿಸದೇ, ಆರೋಗ್ಯ ತಪಾಸಣೆ ಮಾಡಿಕೊಳ್ಳುವುದು ಅಗತ್ಯ ಎಂದು ಯುವಜನ ಮತ್ತು ಅಭಿವೃದ್ಧಿ ಸಂಸ್ಥೆಯ ಮೇಲ್ವಿಚಾರಕ ಪರಮೇಶ್.ಎನ್ ತಿಳಿಸಿದರು.

ತಾಲ್ಲೂಕಿನ ಕಸಬಾ ಹೋಬಳಿಯ ಮಾಕವಳ್ಳಿ ಗ್ರಾಮದಲ್ಲಿ ಯುವಜನ ಮತ್ತು ಅಭಿವೃದ್ಧಿ ಸಂಸ್ಥೆ ಮಂಡ್ಯ ಹಾಗೂ ಮಾಕವಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ಗ್ರಾಮೀಣ ಪ್ರದೇಶದ ರೈತರು ಕೃಷಿ ಚಟುವಟಿಕೆಯ ಕಾಯಕದ ಒತ್ತಡದಲ್ಲಿ ತಮ್ಮ ಆರೋಗ್ಯದ ಕಡೆ ಗಮನಹರಿಸದೆ ರಕ್ತದೊತ್ತಡ,ಸಕ್ಕರೆ ಕಾಯಿಲೆ, ಕ್ಷಯ,ಅಪೌಷ್ಟಿಕತೆ ಸೇರಿದಂತೆ ಇತರೆ ಸಣ್ಣಪುಟ್ಟ ಕಾಲೆಗಳ ಹಾಗಾಗ ತಪಾಸಣೆ ಮಾಡಿಸಿಕೊಳ್ಳಬೇಕು.ಆರ್ಥಿಕವಾಗಿ ದುರ್ಬಲ ವರ್ಗದ ಜನರು ತಮ್ಮ ಆರೋಗ್ಯದ ಕಾಯಿಲೆಯ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ಅಲೆದು ಹಣ ಖರ್ಚು ಮಾಡುವನ್ನು ತಪ್ಪಿಸಲು ಕಾಯಿಲೆಗಳ ಬಗ್ಗೆ ಮುಂಜಾಗ್ರ ವಹಿಸಬೇಕಿದೆ.ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಉಚಿತ ಆರೋಗ್ಯ ತಪಾಸಣೆ ಶಿಬಿರಗಳಲ್ಲಿ ಭಾಗವಹಿಸಿ,ತಮ್ಮ ಆರೋಗ್ಯ ತಪಾಸಣೆ ಮಾಡಕೊಳ್ಳಬೇಕು ಎಂದು ಹೇಳಿದರು.




ಗ್ರಾಮ ಮುಖಂಡ ಪಟೇಲ್ ದೇವರಸೇಗೌಡ ಮಾತನಾಡಿ ಗ್ರಾಮೀಣ ಪ್ರದೇಶದ ಜನರ ಆರೋಗ್ಯದ ಸುರಕ್ಷತೆಗೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಪ್ರತಿ ವರ್ಷದಂತೆ ಈ ವರ್ಷವೂ ಕೂಡ ನಮ್ಮ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರದ ಏರ್ಪಡಿಸಿ ಬಡವ ಬಲ್ಲಿಗ ಎಂಬ ಭೇದ ಭಾವವಿಲ್ಲದೆ ಉಚಿತ ಆರೋಗ್ಯ ಶಿಬಿರ ರೂಪಿಸಿರುವುದು ನಿಜಕ್ಕೂ ಶ್ಲಾಘನೀಯ. ಪ್ರತಿಯೊಬ್ಬ ಗ್ರಾಮೀಣ ಜನತೆ ಇಂತಹ ಉಪಯುಕ್ತ ಶಿಬಿರಗಳನ್ನು ಸದುಪಯೋಗ ಪಡಿಸಿಕೊಂಡು ಆರೋಗ್ಯವಂತ ಸಮಾಜಕ್ಕೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಬಳಿಕ ಮಾತನಾಡಿದ ಮುಖಂಡ ನಾಗೇಶ್ ಈ ಹಿಂದಿನ ದಿನಗಳಲ್ಲಿ ನಮ್ಮಲ್ಲಿವಾಂತಿ-ಬೇದಿ, ಟೈಫಾಯಿಡ್, ಕ್ಷಯ, ಕಾಲಾರದಂತಹ ರೋಗಗಳು ಸಾಮಾನ್ಯವಾಗಿದ್ದವು.ಆದರೆ ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ಬಿಪಿ, ಶುಗರ್, ಹೃದ್ರೋಗ ಹಾಗೂ ಕಿಡ್ನಿ ಕಾಯಿಲೆಗಳು ಶ್ರೀಮಂತ ಖಾಯಿಲೆಗಳಾಗಿದ್ದು, ಬಡಜನರು ಆರ್ಥಿಕವಾಗಿ ಭರಿಸಲು ಅಸಾಧ್ಯ. ಗ್ರಾಮೀಣ ಪ್ರದೇಶದ ಬಡ ಜನರಿಗೆ ಇಂತಹ ಉಚಿತ ಶಿಬಿರಗಳ ಮೂಲಕವೇ ಚಿಕಿತ್ಸೆಗೊಳಪಡಿಸಿದಾಗ ಮಾತ್ರ ಅವರನ್ನು ಸಂಕಷ್ಟದಿಂದ ಪಾರು ಮಾಡಲು ಸಾಧ್ಯ ಎಂದರು ಈ ಸಂದರ್ಭದಲ್ಲಿ ಕಿಕ್ಕೇರಿ ಪ್ರಾಥಮಿಕ ಆರೋಗ್ಯ ಕೇಂದ್ರ ಆಪ್ತ ಸಮಾಲೋಚಕಿ ವಿದ್ಯಾ, ಯುವಜನ ಮತ್ತು ಅಭಿವೃದ್ಧಿ ಸಂಸ್ಥೆಯ ಸಂಪರ್ಕ ಕಾರ್ಯಕರ್ತರಾದ ತೇಜಾವತಿ ಚಂದನ,ಸುಷ್ಮಾ, ನಿವೃತ್ತ ಶಿಕ್ಷಕ ಮಾಕವಳ್ಳಿ ಮಂಜೇಗೌಡ,ಗ್ರಾಮದ ಮುಖಂಡರಾದ ನಾಗೇಶ್, ಆನಂದ್, ಜಯರಾಮೇಗೌಡ, ರಂಗಸ್ವಾಮಿ, ಚಂದ್ರಕಲಾ, ಶಾರದಮ್ಮ, ಸೇರಿದಂತೆ ಉಪಸ್ಥಿತರಿದ್ದರು.

ಸುದ್ದಿಯೊಂದಿಗೆ ಮನುಮಾಕವಳ್ಳಿ
ಕೆಆರ್‌ಪೇಟೆ

# ಅನಾಹುತಕ್ಕೆ ಆಹ್ವಾನ ಎಚ್ಚೆತ್ತುಕೊಳ್ಳದ ಅಧಿಕಾರಿಗಳು

ಗುಂಡ್ಲುಪೇಟೆ: ಸಂಜೆ ಆಗುತ್ತಲೇ ಬೀದಿ ದೀಪಗಳು ಬೆಳಗುವಂತೆ ನೋಡಿಕೊಳ್ಳುವುದು ನಿಯಮ ಇದಕ್ಕೆ ಸಂಬಂಧಪಟ್ಟಂತಹ ಪುರಸಭೆ ಅಧಿಕಾರಿಗಳು ಮತ್ತು ಚೆಸ್ಕಾಂ ಅಧಿಕಾರಿಗಳು, ಜನಪ್ರತಿನಿಧಿಗಳು ಗಮನಿಸದಿರುವುದು ವಿಪರ್ಯಾಸದ ಸಂಗತಿ ಎಂಬುದು ಕರುನಾಡ ಯುವಶಕ್ತಿ ಸಂಘಟನೆಯ ತಾಲೂಕು ಅಧ್ಯಕ್ಷರು ಅಬಿಪ್ರಾಯ ಗುಂಡ್ಲುಪೇಟೆ ಪಟ್ಟಣದ ಮೈಸೂರು ಮತ್ತು ಊಟಿ ಹಾಗೂ ಸುಲ್ತಾನ್ ಬತೇರಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಶಾಲಾ ಕಾಲೇಜುಗಳು ಬ್ಯಾಂಕ್ ಮತ್ತು ಸಾರ್ವಜನಿಕ ಆಸ್ಪತ್ರೆ ದಿನ ನಿತ್ಯ ಶಾಲೆಗೆ ಹೋಗುವ ಮಕ್ಕಳು ರಸ್ತೆ ದಾಟುವಾಗ ವಿದ್ಯುತ್ ಇದೆಯಾ ಅಥವಾ ಇಲ್ಲ ಎಂಬುದು ತಿಳಿಯದೇ ಓಡಾಡುವಾಗ ಮಳೆ ಗಾಳಿಗೆ ಅನಾಹುತಗಳು ಸಂಭವಿಸಬಹುದು.



ಬಹಳಷ್ಟು ಕಡೆಗಳಲ್ಲಿ ಬೀದಿ ದೀಪಗಳು ಇದ್ದು ಇಲ್ಲದೆ ಕತ್ತಲಲ್ಲಿ ಸಾರ್ವಜನಿಕರು ಓಡಾಡುತ್ತಿರುತ್ತಾರೆ ಇಂತಹ ಸಂದರ್ಭದಲ್ಲಿ ವಿದ್ಯುತ್ ದೀಪಗಳ ಕೆಲವು ಕಡೆಗಳಲ್ಲಿ ಸ್ವಿಚ್ ಬೋರ್ಡ್‌ಗಳೆ ಇಲ್ಲ. ಇನ್ನೂ ಕೆಲವು ಕಡೆ ಸ್ವಿಚ್ ಬೋರ್ಡ್‌ಗಳು ಮಳೆ ಗಾಳಿಗೆ ಹಾಳಾಗಿದ್ದು, ಅಲ್ಲಲ್ಲಿ ಕಿತ್ತು ಹೋಗಿವೆ. ಕಿತ್ತು ಹೋಗಿರುವ ಸ್ವಿಚ್ ಬೋರ್ಡ್‌ಗಳಿಂದ ವಿದ್ಯುತ್ ತಂತಿಯಿಂದ ಅಪಾಯಕ್ಕೆ ಆಹ್ವಾನ ನೀಡುತ್ತಿವೆ. ಇನ್ನಾದರೂ ಬೀದಿ ದೀಪಗಳ ನಿಯಂತ್ರಣಕ್ಕೆ ಕ್ರಮ ಕೈಗೊಂಡು ಅಧಿಕಾರಿಗಳು ಇತ್ತ ಕಡೆ ಗಮನ ಹರಿಸಿ ಯಾವುದೇ ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕೆ ಗೆ ಮುಂದಾಗಬೇಕು ಎಂದು ಕರುನಾಡ ಯುವಶಕ್ತಿ ಸಂಘಟನೆಯ ತಾಲೂಕು ಅಧ್ಯಕ್ಷರು ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಮುನೀರ್ ಪಾಷ ಒತ್ತಾಯಿಸಿದ್ದಾರೆ

ವರದಿ: ಮಹದೇವಪ್ರಸಾದ್ ಹಂಗಳ

# ಶಿಕ್ಷಕರ ಕ್ಷೇತ್ರದ ಗೆಲುವಿಗೆ ಹೆಚ್ಡಿಕೆ ಸಂತಸ

ಶಿಕ್ಷಕರ ಕ್ಷೇತ್ರಗಳಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿ ಅಭ್ಯರ್ಥಿಗಳಾದ ಎಸ್ ಎಲ್ ಬೋಜೇಗೌಡರು ಮತ್ತು



ಕೆ.ವಿವೇಕಾನಂದ ಅವರು ದೊಡ್ಡ ಅಂತರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಜಯ ಗಳಿಸಿರುವುದಕ್ಕೆ ಕುಮಾರಸ್ವಾಮಿ ಅವರು ಸಂತಸ ವ್ಯಕ್ತಪಡಿಸಿದರು. ಮೊದಲ ಪ್ರಾಶಸ್ತ್ಯದ ಮತಗಳಲ್ಲಿಯೇ ನಮ್ಮ ಅಭ್ಯರ್ಥಿಗಳು ಗೆದ್ದಿದ್ದಾರೆ. ಮೈತ್ರಿ ಶಕ್ತಿ ಏನು ಎನ್ನುವುದು ಕಾಂಗ್ರೆಸ್ ಪಕ್ಷಕ್ಕೆ ಗೊತ್ತಾಗಿದೆ. ಬಿಜೆಪಿ ಜೆಡಿಎಸ್ ಕಾರ್ಯಕರ್ತರು, ನಾಯಕರು ಸಂಘಟಿತವಾಗಿ ಕೆಲಸ ಮಾಡಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಶಿಕ್ಷಕರು ಆಶೀರ್ವಾದ ಮಾಡಿದ್ದಾರೆ. ಎಲ್ಲಾ ಶಿಕ್ಷಕರು ಹಾಗೂ ಎರಡು ಪಕ್ಷಗಳ ಕಾರ್ಯಕರ್ತರಿಗೆ ಹೃದಯ ತುಂಬಿದ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು ಮಾಜಿ ಮುಖ್ಯಮಂತ್ರಿಗಳು. ಗೆಲುವು ಸಾಧಿಸಿರುವ ಇಬ್ಬರೂ ಅಭ್ಯರ್ಥಿಗಳು ಶಿಕ್ಷಕರ ದನಿಯಾಗಿ ಪ್ರಾಮಾಣಿಕ ಕೆಲಸ ಮಾಡಲಿದ್ದಾರೆ ಎಂದು ಹೇಳಿದರು.

# ಪ್ರಜ್ವಲ್ ರೇವಣ್ಣ ಮತ್ತಷ್ಟು ದಿನ ಎಸ್‌ಐಟಿ ವಶಕ್ಕೆ



ಬೆಂಗಳೂರು: ಮಹಿಳೆಯರಿಗೆ ಲೈಂಗಿಕ ದೌರ್ಜನ್ಯ ಹಾಗೂ ಅಶ್ಲೀಲ ವಿಡಿಯೋ ಚಿತ್ರೀಕರಣ ಪ್ರಕರಣದಲ್ಲಿ ಬಂಧನಕ್ಕೀಡಾಗಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಇನ್ನಷ್ಟು ದಿನ ಎಸ್‌ಐಟಿ ವಶಕ್ಕೆ ನೀಡಿ ಬೆಂಗಳೂರು ನ್ಯಾಯಾಲಯ ಆದೇಶ ಹೊರಡಿಸಿದೆ. ಸದ್ಯ ಆರೋಪಿಯು ಯಾವುದೇ ಮಾಹಿತಿ ನೀಡುತ್ತಿಲ್ಲ. ಇನ್ನಷ್ಟು ದಿನಗಳ ವಿಚಾರಣೆ ಅಗತ್ಯವಿದೆ ಎಂದು ಎಸ್‌ಐಟಿ ಪರ ವಕೀಲರು ವಾದ ಮಂಡಿಸಿದ್ದರು. ಹೀಗಾಗಿ, ಬೆಂಗಳೂರಿನ 42ನೇ ಎಸಿಎಂಎಂ ನ್ಯಾಯಾಲಯವು ಜೂನ್ 10ವರೆಗೂ ವಶಕ್ಕೆ ನೀಡಿ ಆದೇಶ ನೀಡಿದೆ. ಈ ಪ್ರಕರಣದಲ್ಲಿ ತನಿಖೆ ಇನ್ನೂ ಮುಗಿದಿಲ್ಲ. ವಿದೇಶದಲ್ಲಿದ್ದ ವೇಳೆ ಹಣ ಹೇಗೆ ಸಂದಾಯವಾಯಿತು ತಿಳಿದಿಲ್ಲ. ಪ್ರಜ್ವಲ್ ತನ್ನ ಮೊಬೈಲ್ ಕಳೆದು ಹೋಗಿದೆ ಎಂದಿದ್ದು ಈ ಬಗ್ಗೆಯೂ ಇನ್ನೂ ತನಿಖೆ ಆಗಬೇಕಿದೆ. ಕೆಲವು ಸಂತ್ರಸ್ತೆ,ಸಾಕ್ಷಿಗಳೊಂದಿಗೆ ಪ್ರಜ್ವಲ್ ನನ್ನು ಮುಖಾಮುಖಿ ಮಾಡಿಸಬೇಕಿದೆ. ನಾನು ಏನೂ ಮಾಡಿಲ್ಲ ಮಾತ್ರವೇ ಆರೋಪಿ ಪ್ರಜ್ವಲ್ ಹೇಳುತ್ತಿದ್ದಾರೆ. ಹೀಗಾಗಿ ತನಿಖೆಗೆ ಮತ್ತಷ್ಟು ಸಮಯ ಬೇಕು ಎಂದು ಎಸ್‌ಐಟಿ ಪರ ಎಸ್ ಪಿಪಿ ಅಶೋಕ್ ನಾಯಕ್ ವಾದ ಮಾಡಿದರು.

# ಧಾರಾಕಾರ ಮಳೆಗೆ ಈರುಳ್ಳಿ ಬೆಳೆನಾಶ

ಗುಂಡ್ಲುಪೇಟೆ :ತಾಲೂಕಿನ ಕೆಲವು ಭಾಗಗಳಲ್ಲಿ ಸುರಿದ ಸಿಡಿಲಬ್ಬರದ ಮಳೆಗೆ ಜನಜೀವನ ಅಸ್ತವ್ಯಸ್ತ ಉಂಟಾಗಿ ಅಪಾರ ಪ್ರಮಾಣದ ಬೆಳೆ ನಷ್ಟ ಉಂಟಾಗಿದೆ. ಗುಂಡ್ಲುಪೇಟೆ ತಾಲೂಕಿನ ಹಂಗಳ,ದೇವರಹಳ್ಳಿ,ವೀರನಪುರ ಮಾದಾಪಟ್ಟಣ ಸೋಮಹಳ್ಳಿ ಬಾಚಹಳ್ಳಿ, ಅಂಕಹಳ್ಳಿ, ಬೊಮ್ಮಲಾಪುರ, ಮಾಲಾಪುರ, ಬೆಳವಾಡಿ, ಶೆಟ್ಟಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮದಲ್ಲಿ ಎರಡೂ ದಿನವೂ ಸಂಜೆ ಸುರಿದ ಧಾರಾಕಾರ ಮಳೆಗೆ ಕೆರೆ ಕಟ್ಟೆಗಳು ತುಂಬಿಹೋಗಿದೆ.



ಮಳೆಯ ರಭಸಕ್ಕೆ ರೈತರು ಜಮೀನಿನಲ್ಲಿ ಬಿತ್ತನೆ ಮಾಡಿದ್ದ ಜಮೀನು ಪ್ರದೇಶದಲ್ಲಿ ಕೊರಕಲು ಉಂಟಾಗಿದ್ದು ರಸ್ತೆ ಓಣಿಗಳು ಮಳೆಯಿಂದ ತುಂಬಿ ಹರಿದ ಕಾರಣ ರಸ್ತೆ ದಾಟಲು ಜಮೀನಿಗೆ ತೆರಳಿದ್ದ ರೈತರು ಕೂಲಿ ಕಾರ್ಮಿಕ ಮಹಿಳೆಯರು ರೈತರು ಹರಸಾಹಸಪಟ್ಟಿದ್ದಾರೆ. ಹಂಗಳ ಗ್ರಾಮದ ಗ್ರಾಮ ಪಂಚಾಯತಿ ಸದಸ್ಯರಾದ ಹೆಚ್.ಎಮ್.ನಂದೀಶ ಅವರು ಜಮೀನಿನಲ್ಲಿ ನೀರು ನುಂಗಿ ಮೂರು ಎಕರೆ ಈರುಳ್ಳಿ ಬೆಳೆನಾಶವಾಗಿದೆ.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjanevarth.com
ಶುಕ್ರವಾರ 07 ಜೂನ್ 2024
Friday 07 June 2024

# ಪರಿಸರ ಸಂರಕ್ಷಣೆ ಪ್ರತಿಯೊಬ್ಬ ವ್ಯಕ್ತಿಯ ಆದ್ಯ ಕರ್ತವ್ಯ



ತಿ.ನರಸೀಪುರ :– ಪರಿಸರ ಸಂರಕ್ಷಣೆ ಪ್ರತಿಯೊಬ್ಬ ವ್ಯಕ್ತಿಯ ಆದ್ಯ ಕರ್ತವ್ಯ ಎಂದು ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರಾದ. ಹೆಚ್ ಹನುಮಂತು ರವರು ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ವಿಶ್ವ ಪರಿಸರ ದಿನ ಆಚರಣೆ ಅಂಗವಾಗಿ ತಾಲ್ಲೂಕು ಕಾನೂನು ಸೇವೆ ಸಮಿತಿ, ವಕೀಲರ ಸಂಘ,ಮತ್ತು ಅರಣ್ಯ ಇಲಾಖೆ ಇವರ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಸಸಿ ನೆಡುವ ಮೂಲಕ ಉದ್ಘಾಟಿಸಿ ಮಾತನಾಡಿದ ನ್ಯಾಯಾಧೀಶ ಹೆಚ್ ಹನುಮಂತರವರು ನಮ್ಮ ಸುತ್ತಮುತ್ತ ಪರಿಸರ ಜೊತೆಗೆ ಅರಣ್ಯವನ್ನು ಬೆಳೆಸುವುದು ಮತ್ತು ಅವುಗಳ ರಕ್ಷಸಿಸುವುದು ನಮ್ಮ ಜವಾಬ್ದಾರಿ ಆಗಬೇಕು. ಎಂದರು.

ನಾವೆಲ್ಲರೂ ನಮ್ಮ ಮನೆ ಜಮೀನುಗಳಲ್ಲಿ ಗಿಡ ನೆಟ್ಟು ಪರಿಸರ ರಕ್ಷಣೆ ಮಾಡಿದರೆ ಅರಣ್ಯವನ್ನು ರಕ್ಷಣೆ ಮಾಡಿದಂತಾಗುತ್ತದೆ ಆರೋಗ್ಯಕರ ಸಮಾಜ ನಿರ್ಮಾಣವಾಗಬೇಕೆಂದರೆ ಪರಿಸರ ಉತ್ತಮವಾಗಿರಬೇಕು ನಮ್ಮ ಸುತ್ತ ಮುತ್ತಲು ಮರ ಗಿಡಗಳು ಇರಬೇಕು ಅದಕ್ಕಾಗಿ ಪ್ರತಿಯೊಬ್ಬರು ತಮಗಿರುವ ಇರುವ ಸ್ಥಳಾವಕಾಶ,ಕೆರೆ ಕಟ್ಟೆ,ಕಾಲು ದಾರಿಗಳಲ್ಲಿ ಸಸಿಗಳನ್ನು ನೆಟ್ಟು ಬೆಳಸಿ ಎಂದು ಕರೆ ಕೊಟ್ಟರು.

ಕೋವಿಡ್ ಸಮಯದಲ್ಲಿ ಆಮ್ಲಜನಕ ಕೊರತೆಯಿಂದ ಎಷ್ಟು ಜೀವಗಳು ಕಳೆದು ಹೋಗಿವೆ ಮತ್ತು ಈ ವರ್ಷ ಅವಮಾನ ವೈಪರಿತಯಿಂದ ಎಷ್ಟೋ ಜನರು ರಸ್ತೆ ರಸ್ತೆಗಳಲ್ಲಿ ಪ್ರಾಣ ಕಳೆದುಕೊಂಡಿರುವುದನ್ನು ಕೇಳಿದ್ದೇವೆ. ಇವುಗಳ ದುರಂತಕ್ಕೆ ಪರಿಸರ ನಾಶವೇ ಕಾರಣ ಎಂದು ತಿಳಿಸಿದರು.

ಮನುಷ್ಯನ ಆಸೆಗೆ ಮಿತಿ ಇರಬೇಕು ವಾಸಕ್ಕೆ ಮನೆ ಇರಬೇಕು ಆದರೆ ಇತ್ತೀಚಿನ ದಿನಗಳಲ್ಲಿ ಬಾಡಿಗೆಗೆ ನೀಡಲು ಮನೆಗಳನ್ನು ಕಟ್ಟುವುದು ಹೆಚ್ಚಾಗಿದೆ ಅಲ್ಲದೆ ವಾಣಿಜ್ಯ ಉದ್ದೇಶಕ್ಕಾಗಿ ಅರಣ್ಯ ನಾಶವಾಗುತ್ತದೆ ಇದು ನಿಲ್ಲಬೇಕು ಇಲ್ಲದಿದ್ದರೆ ತುಂಬ ತೊಂದರೆಗೆ ಮನುಷ್ಯ ಸಿಲುಕಿಕೊಳ್ಳುತ್ತಾನೆ ಎಂದು ಎಚ್ಚರಿಸಿದರು.

ಛತ್ತೀಸಘಡ ಅಥವಾ ಪಂಜಾಬ್ ರಾಜ್ಯಕ್ಕೆ ಸೇರಿದ ಒಂದು ಗ್ರಾಮದಲ್ಲಿ ಒಂದು ಹೆಣ್ಣು ಮಗು ಜನನವಾದರೆ ಒಂದು ಸಸಿಯನ್ನು ನೆಟ್ಟು ಪೋಷಿಸುತ್ತಾರೆ. ಆದರೆ ನಮ್ಮಲ್ಲಿ ಹೆಣ್ಣು ಎಂದರೆ ಮೂಗು ಮುರಿಯುತ್ತಾರೆ.ಅದು ನಿಲ್ಲಬೇಕು ಎಂದು ಹೇಳಿ ವಕೀಲರು ಹಾಗೂ ನ್ಯಾಯಾಲದ ಸಿಬ್ಬಂದಿಗಳಿಗೆ ತಲಾ ಒಂದೊಂದು ಸಸಿಯನ್ನು ವಿತರಿಸಿದರು. ಈ ಸಂದರ್ಭದಲ್ಲಿ ನ್ಯಾಯಾಧೀಶರುಗಳಾದ ವೆಂಕಟೇಶ್, ಶ್ಯಾಮ್ ಪ್ರಸಾದ್, ಹಾಗೂ ಅರಣ್ಯ ಇಲಾಖೆ ಆರ್ ಎಫ್ ಒ. ರಾಜೇಶ್, ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಉಪಾಧ್ಯಕ್ಷ ಶಾಂತ ನಾಗರಾಜು, ಕಾರ್ಯದರ್ಶಿ ಸೋಮಣ್ಣ, ಸಹ ಕಾರ್ಯದರ್ಶಿ ತುಂಬಲ ಮಹದೇವ ಸ್ವಾಮಿ, ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಗಳಾದ ಮಹದೇವಸ್ವಾಮಿ, ಪ್ರಶಾಂತ್, ಮಹದೇವ ಸ್ವಾಮಿ, ರಾಮಣ್ಣ, ಶ್ರೀಕಾಂತ್ ಸೇರಿದಂತೆ ವಕೀಲರು ನ್ಯಾಯಾಲಯದ ಸಿಬ್ಬಂದಿಗಳು ಹಾಜರಿದ್ದರು.

# ಕಂದೇಗಾಲ ಗ್ರಾಮಕ್ಕೆ ಅಧಿಕಾರಿಗಳು ಭೇಟಿ ಪರಿಶೀಲನೆ



ಗುಂಡ್ಲುಪೇಟೆ: ಶಿಿಡನಪುರ ಗ್ರಾಮ ಪಂಚಾಯತಿ ಕಂದೇಗಾಲ ಗ್ರಾಮದಲ್ಲಿ ವಾಂತಿಬೇದಿ ಪ್ರಕರಣ ದಾಖಲಾದ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಭೇಟಿ ನೀಡಿ ನೀರಿನ ಸ್ಥಾವರಗಳನ್ನು ಪರಿಶೀಲಿಸಲಾಯಿತು ಮತ್ತು ಕುಡಿ ನೀರಿನ ಸ್ಥಾವರವನ್ನು ಆರು ದಿನಗಳ ಹಿಂದೆ ಸ್ವಚ್ಚಗೊಳಿಸಿದ್ದು ಸ್ವಚ್ಚಗೊಳಿಸಿದ ನಂತರ ದಿನಾಂಕವನ್ನು ಕೂಡ ನಮೂದಿಸಲಾಗುತ್ತದೆ ಮತ್ತು ಪ್ರಕರಣ ದಾಖಲಾದ ಮನೆಗಳಿಗೆ ಭೇಟಿ ನೀಡಿ ಸದರಿ ಜಾಗದಲ್ಲಿ ನೀರಿನ ಪರೀಕ್ಷೆ ಮಾಡಲಾಗಿದ್ದು ಪರೀಕ್ಷೆ ಕೂಡ ಉತ್ತಮವಾಗಿದ್ದು ಯಾವುದೇ ಕಂಟಾಮಿನೇಷನ್ ಕಂಡುಬಂದಿರುವುದಿಲ್ಲ ಮುಂದುವರೆದು ಟ್ಯಾಂಕನ್ನು ಕ್ಲೋರಿನೇಷನ್ ಮಾಡಿಸಲಾಗಿದ್ದು ಸದರಿ ಗ್ರಾಮದಲ್ಲಿ ನೀರಿನ ಬಳಕೆ ಬಗ್ಗೆ ಗ್ರಾಮ ಪಂಚಾಯತಿ ವಾಹನದ ಮುಖಾಂತರ ಜಾಗೃತಿ ಮೂಡಿಸಲಾಯಿತು ಈ ಸಮಯದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ರಾಮಲಿಂಯ್ಯ ಹಾಗೂ ಕುಡಿಯುವ ನೀರು ಮತ್ತು ನೈರ್ಮಲ್ಯ ಎಇಇ ಮಧುಸೂಧನ್ ಪಿಡಿಓ ಮೋಹನ್ ಪರಿಶೀಲನೆ ನಡೆಸಿದ್ದರು

ವರದಿ: ಮಹದೇವಪ್ರಸಾದ್ ಹಂಗಳ

# ಭಾರತೀಯ ಸೈನ್ಯದಲ್ಲಿ 38 ವರ್ಷ ಸೇವೆ ಸಲ್ಲಿಸಿ ನಿವೃತ್ತಿಯಾಗಿ ತಾಯ್ನಾಡಿಗೆ ಮರಳಿದ ತಾಲ್ಲೂಕಿನ ನಾಕಲಗೂಡು ಗ್ರಾಮದ ಎನ್.ಡಿ.ಸ್ವಾಮಿ

ಆಲೂರು: ಭಾರತೀಯ ಸೈನ್ಯದಲ್ಲಿ 38 ವರ್ಷ ಸೇವೆ ಸಲ್ಲಿಸಿ ನಿವೃತ್ತಿಯಾಗಿ ತಾಯ್ನಾಡಿಗೆ ಮರಳಿದ ತಾಲೂಕಿನ ನಾಕಲಗೂಡು ಗ್ರಾಮದ ಎನ್.ಡಿ ಸ್ವಾಮಿ ಅವರನ್ನು ಆಲೂರು ತಾಲೂಕಿನ ವಿವಿಧ ದಲಿತ ಪರ ಅವರ ಕಾರ್ಯವೈಖರಿಯನ್ನು ಗೌರವಿಸಬೇಕಾದದ್ದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಜನಿಸಿದ ಗ್ರಾಮ, ಕುಟುಂಬ, ಆರೋಗ್ಯವನ್ನು ಲೆಕ್ಕಿಸದೆ ಅತೀವ ಸಂಕಷ್ಟದ ಪರಿಸ್ಥಿತಿಯಲ್ಲಿ ಸೈನಿಕರು ದೇಶವನ್ನು ರಕ್ಷಣೆ ಮಾಡುವ ಹಾಕುತ್ತಿರುವುದು ವಿಪರ್ಯಾಸದ ಸಂಗತಿ. ಆದ್ದರಿಂದ ಮುಂದಿನ ದಿನಗಳಲ್ಲಿ ಯುವಕರು ಸೈನ್ಯ ಸೇರುವ ಸಂಕಲ್ಪ ಮಾಡಬೇಕು ಭಾರತದಲ್ಲಿ ಸೈನಿಕರಿಗೆ ತಮ್ಮದೇ ಆದ ಇತಿಹಾಸವಿದೆ ಎಂದು ಸ್ಮರಿಸಿದರು.



ಸಂಘಟನೆಗಳು ಹಾಗೂ ಗ್ರಾಮಸ್ಥರಿಂದ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು. ಸ್ವಗ್ರಾಮಕ್ಕೆ ಮರಳಿದ ಎನ್ ಡಿ.ಸ್ವಾಮಿ ಅವರನ್ನು ಆಲೂರು ಪಟ್ಟಣದ ಕೊನೆ ಪೇಟೆಯಿಂದ ಕೆಇಬಿ ಸರ್ಕಲ್‌ನಲ್ಲಿರುವ ಅಂಬೇಡ್ಕರ್ ಭವನದ ವರೆಗೆ ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ಕರೆತರಲಾಯಿತು. ಈ ಸಂದರ್ಭದಲ್ಲಿ ಮಾಜಿ ಶಾಸಕರುಗಳಾದ ಎಚ್.ಕೆ.ಕುಮಾರಸ್ವಾಮಿ ಎಚ್ ಎಂ ವಿಶ್ವನಾಥ್ ಹಾಗೂ ಹಾಲಿ ಶಾಸಕ ಸಿಮೆಂಟ್ ಮಂಜು ಭಾಗಿಯಾಗಿದ್ದರು. ಯುವಕರು ಪಟಾಕಿ ಸಿಡಿಸಿ ವಿವಿಧ ಹೂಮಾಲೆಗಳನ್ನು ಹಾಕಿ ಬರಮಾಡಿಕೊಂಡರು.

ಈ ವೇಳೆ ಶಾಸಕ ಸಿಮೆಂಟ್ ಮಂಜುನಾಥ್ ಮಾತನಾಡಿ, ಸೈನಿಕರು ಗಡಿ ಕಾಯುವ ಮೂಲಕ ದೇಶವನ್ನು ರಕ್ಷಣೆ ಮಾಡಿ ನಾಗರಿಕರಿಗೆ ನೆಮ್ಮದಿಯ ಜೀವನ ಒದಗಿಸಿದ್ದಾರೆ. ಮೂಲಕ ಭಾರತದ ನಾಗರಿಕರಿಗೆ ಭದ್ರತೆಯನ್ನು ಒದಗಿಸಿದ್ದಾರೆ. ಸೈನಿಕರನ್ನು ಗೌರವಿಸುವ ಕೆಲಸವಾದರೆ ನಮ್ಮ ಜೀವನಕ್ಕೆ ಸಾರ್ಥಕತೆ ಸಿಕ್ಕಂತಾಗುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. 28 ವರ್ಷ ಕಾಲ ಸುಧೀರ್ಘ ಸೇವೆ ಸಲ್ಲಿಸಿ ಈಗ ಸ್ವಗ್ರಾಮಕ್ಕೆ ಮರಳಿದ್ದಾರೆ. ಅವರು ನಮ್ಮೆಲ್ಲರಿಗೂ ಸ್ಫೂರ್ತಿಯಾಗಿದ್ದು, ಯುವಕರು ಸೈನ್ಯ ಸೇರುವ ಮೂಲಕ ದೇಶವನ್ನು ಕಾಯುವ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ನಿವೃತ ಸೈನಿಕ ಎನ್.ಡಿ ಸ್ವಾಮಿ ಮಾತನಾಡಿ, ಸೈನ್ಯದಲ್ಲಿ ಸೇವೆ ಸಲ್ಲಿಸುವುದು ಅತ್ಯಂತ ಆತ್ಮತೃಪ್ತಿಯ ಕೆಲಸವಾಗಿದೆ. ಈ ದೇಶಕ್ಕೆ ಮತ್ತು ನಾಡಿಗೆ ನಿಜವಾದ ಕೊಡುಗೆ ಕೊಡುವುದಾದರೆ ಅದು ಸೈನಿಕ ವೃತ್ತಿಯಿಂದ ಮಾತ್ರ ಸಾಧ್ಯ. ಇತ್ತೀಚಿನ ದಿನಗಳಲ್ಲಿ ಭಾರತೀಯ ಸೈನ್ಯ ಸೇರುವುದಕ್ಕೆ ಯುವಕರು ಹಿಂದೇಟು

ಕಾರ್ಯಕ್ರಮದಲ್ಲಿ ತಾಲೂಕು ಎಸ್ಸಿ. ಎಸ್ಟಿ ನೌಕರರ ಸಂಘದ ಅಧ್ಯಕ್ಷ ವಾಸುದೇವ್, ಮಹಾಬೋಧಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಶಿವಾನಂದ್, ಉಪಾಧ್ಯಕ್ಷ ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಾಂತ ಕೃಷ್ಣ, ಎಸ್ಸಿ ಮೋರ್ಚಾ ಉಪಾಧ್ಯಕ್ಷ ರವಿ ಕಾರ್ಜುವಳ್ಳಿ, ತಾ.ಪಂ ಮಾಜಿ ಸದಸ್ಯ ನಟರಾಜ್ ನಾಕಲಗೂಡು, ತಾಲೂಕು ಬಿಜೆಪಿ ಅಧ್ಯಕ್ಷೆ ಉಮಾ ರವಿಪ್ರಕಾಶ್, ನಿವೃತ್ತ ಶಿಕ್ಷಕರಾದ ಕೆ.ಎಸ್ ನಿರ್ವಣಯ್ಯ, ಕೆ.ಬಿ ಗುರುಮೂರ್ತಿ, ಹರೇಂದ್ರ, ದಲಿತ ಮುಖಂಡರಾದ ದೇವರಾಜ್, ದ್ಯಾವಪ್ಪ, ನಿವೃತ್ತ ಸೈನಿಕ ಸಂಘದ ಉಪಾಧ್ಯಕ್ಷ ನಾಗೇಶ್, ನಿವೃತ್ತ ಕೃಷಿ ಅಧಿಕಾರಿ ಜವರಪ್ಪ, ಐಟಿಐ ಕಾಲೇಜು ಆಧ್ಯಾಪಕ ನಾಗೇಶ್, ಸೇರಿದಂತೆ ತಾಲೂಕಿನ ಹಲವು ಸಂಘ ಸಂಸ್ಥೆಗಳ ದಲಿತ ಪರ ಸಂಘಟನೆಗಳ ಮುಖಂಡರು ಹಾಜರಿದ್ದರು.

# ಅಭಿವೃದ್ಧಿಯಿರಲಿ ಮೂಲಭೂತ ಸೌಕರ್ಯದಿಂದಲೇ ವಂಚಿತವಾಗುತ್ತಿರುವ ಮಾಕವಳ್ಳಿ ಗ್ರಾಮ

ಕೆಸರಿನ ಗದ್ದೆಯಂತಾಗಿರುವ ರಸ್ತೆಗಳು,ಸೂಕ್ತ ಸಮಯದಲ್ಲಿ ನಿರ್ವಹಣೆ ಇಲ್ಲದೆ ಗಬ್ಬೆದ್ದು ನಾರುತ್ತಿರುವ ಚರಂಡಿಗಳು, ಶಿಥಿಲಗೊಂಡು ಧರೆಗೆ ಉರುಳಿರುವ ಶಾಲಾ ತಡೆಗೋಡೆ,ಬೀಳುವ ಸ್ಥಿತಿಯಲ್ಲಿರುವ ಶ್ರೀ ಆಂಜನೇಯ ದೇವಾಲ ಹಾಗೂ ವಿದ್ಯುತ್ ಕಂಬಗಳು, ಕೆ.ಆರ್.ಪೇಟೆ ತಾಲ್ಲೂಕಿನ ಕಸಬಾ ಹೋಬಳಿಯ ಮಾಕವಳ್ಳಿ ಗ್ರಾಮ ಕೆ.ಆರ್ ಪೇಟೆ ತಾಲೂಕು ಕೇಂದ್ರದಿಂದ ಸುಮಾರು ಏಳು ಕಿಲೋಮೀಟರ್ ದೂರವಿರುವ ಮಾಕವಳ್ಳಿ ಗ್ರಾಮ,ಈ ಯಾವುದೋ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಗ್ರಾಮವಲ್ಲ ಸ್ವತಹ ಗ್ರಾಮ ಪಂಚಾಯಿತಿ,ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮಾಕವಳ್ಳಿ ಕೋರಮಂಡಲ ಸಕ್ಕರೆ ಕಾರ್ಖಾನೆ ಒಳಗೊಂಡಿರುವ ವಾಣಿಜ್ಯ ಕೇಂದ್ರವಾಗಿ ಮಾರ್ಪಟ್ಟಿರುವ ಗ್ರಾಮ. ಮಾಕವಳ್ಳಿ ಗ್ರಾಮದಲ್ಲಿ 2000 ಕ್ಕೂ ಹೆಚ್ಚು ಮಂದಿ ಜನರು ವಾಸುಸುತ್ತಿದ್ದು ಬಹು ಸಂಖ್ಯೆಯಲ್ಲಿ ಒಕ್ಕಲಿಗರು,ಕುಂಬಾರರು, ಕುರುಬರು, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿದ್ದಾರೆ ಅಲ್ಪಸಂಖ್ಯೆಯಲ್ಲಿ ಲಿಂಗಾಯಿತರು,ನಯನಜ ಕ್ಷತ್ರಿಯರು ,ಮಡಿವಾಳರು, ಗಾಣಿಗರು,ವೈಷ್ಣವರು ಸೇರಿದಂತೆ ಹಲವು ಸಮುದಾಯಗಳು ಇದ್ದರು, ಜಾತಿ ಭೇದವಿಲ್ಲದೆ ಸೌಹಾರ್ದತೆಯಿಂದ ಸರಳತೆಯಲ್ಲಿ ಖುಷಿ ಚಟುವಟಿಕೆಯನ್ನು ಅವಲಂಬಿಸಿ ಜೀವನ ಸಾಗಿಸುತ್ತಿರುವ ಗ್ರಾಮದ ಜನರಿಗೆ ಅಭಿವೃದ್ಧಿ ಇರಲಿ ಮೂಲಭೂತ ಸೌಕರ್ಯವೇ ಸಮರ್ಪಕವಾಗಿ ದೊರಕುತ್ತಿಲ್ಲ ಎಂಬುವುದಕ್ಕೆ ಕೈಗನ್ನಡಿಯಾಗಿ ಪ್ರಸ್ತುತವಿರುವ ಗ್ರಾಮದ ಪರಿಸ್ಥಿತಿಯೇ ಹೇಳುತ್ತಿದೆ. ದೇಶಕ್ಕೆ ಸ್ವತಂತ್ರ ದೊರಕಿ 76 ವರ್ಷಗಳು ಕಳೆದರೂ ಈ ಗ್ರಾಮದಲ್ಲಿ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳಿಂದ ಗ್ರಾಮದ ಜನರು ವಂಚಿತರಾಗಿದ್ದಾರೆ.

ಗ್ರಾಮದಲ್ಲಿ ಅದ್ವಾನದ ವ್ಯವಸ್ಥೆಗಳ ಸರಮಾಲೆ ಗ್ರಾಮದ ಒಳಭಾಗದ ರಾಜಬೀದಿಗಳಿಗೆ ಡಾಂಬರೀಕರಣ ಮತ್ತು ಸಿಮೆಂಟ್ ರಸ್ತೆ ಇರಲಿ ಮಣ್ಣಿನ ರಸ್ತೆ ಕಂಡು 20 ವರ್ಷಗಳೇ ಕಳೆದರು ಅದರಲ್ಲೂ ಮುಂಗಾರು ಮಳೆಯ ಸಮಯದಲ್ಲಿ ಇರುವ ಮಣ್ಣಿನ ರಸ್ತೆಯು ಕೂಡ ಕೆಸರಿನ ಗದ್ದೆಯಂತೆ ಮಾರ್ಪಟ್ಟು ಸಾರ್ವಜನಿಕರು ವಾಹನ ಮತ್ತು ನಡೆದಾಡಲು ಹರ ಸಾಹಸವೇ ಪಡಬೇಕಾದಂತ ಸ್ಥಿತಿ ನಿರ್ಮಾಣವಾಗುತ್ತಿದೆ ಈ ವ್ಯವಸ್ಥೆಯಲ್ಲಿ ಸೂಕ್ತ ಸಮಯಕ್ಕೆ ಅದ್ವಾನಗೊಂಡಿರುವ ಚರಂಡಿಯ ನಿರ್ವಹಣೆಯೂ ಇಲ್ಲದೆ ಇರುವುದು ವಿಪರ್ಯಾಸವಾಗಿರುವ ಜೊತೆಗೆ ಗ್ರಾಮ ಪಂಚಾಯಿತಿಯಿಂದಲೇ ಗ್ರಾಮದ ಪ್ರಮುಖ ಸ್ಥಳಗಳಲ್ಲಿ ನಿರ್ಮಾಣಗೊಂಡಿರುವ ಮಿನಿ ವಾಟರ್ ಟ್ಯಾಂಕ್ ಗಳು ಸೂಕ್ತ ನಿರ್ವಹಣೆ ಇಲ್ಲದೆ ಗಿಡ ಗೆಡ್ಡೆಗಳ ತಾಣ ಹಾಗೂ ತಿಪ್ಪೆಯ ಕೊಳಕು ಚರಂಡಿಯ ಕಲುಷಿತ ನೀರು ಆವರಿಸಿಕೊಂಡು ಗಬ್ಬೆದ್ದು ನಾರುತಿದ್ದಾವೆ.ಇಂತಹ ವ್ಯವಸ್ಥೆಯಿಂದ ಗ್ರಾಮದ ಸಣ್ಣ ಮಕ್ಕಳಿಂದ ದೊಡ್ಡವರಿಗೂ ಜ್ವರ.ಡೆಂಗು.ಮಲೇರಿಯಾ.ಕಾಯಿಲೆಗಳಿಗೆ ದಿನನಿತ್ಯ ಗ್ರಾಮದ ಜನತೆ ಒಬ್ಬರಲ್ಲ ಒಬ್ಬರು ತುತ್ತಾಗುತ್ತ ಆಸ್ಪತ್ರೆಗಳಲ್ಲಿ ದಾಖಲಾಗಿರುವ ಸಂಖ್ಯೆ ಹೆಚ್ಚಳವಾಗುತ್ತಿದೆ ಎಂದು ಸಾರ್ವಜನಿಕ ವಲಯದಲ್ಲಿ ದಟ್ಟವಾಗಿ ಕೇಳಿಬರುತ್ತಿದೆ.

ಶಾಲಾ ತಡೆಗೋಡೆ ಶಿಥಿಲಗೊಂಡು ನೆಲಸಮ. ಗ್ರಾಮ ಪಂಚಾಯಿತಿ ಒಳಪಟ್ಟ ಗ್ರಾಮದ ಶಾಲೆ ಎಂದರೆ ವ್ಯಾಪ್ತಿಗಳಲ್ಲಿ ಬರುವ ಶಾಲೆಗಳು ನಾಚುವಂತಿರಬೇಕು ಆದರೆ ವಿಪರ್ಯಾಸ ಎಂದರೆ ಗ್ರಾಮ ಪಂಚಾಯಿತಿಯ ಕೇಂದ್ರ ಬಿಂದು ಗ್ರಾಮದಲ್ಲೇ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ತಡೆಗೋಡೆ ಅರ್ಧಭಾಗ ಶಿಥಲಗೊಂಡು ದರೆಗುರುಳಿದರೆ ಉಳಿದ ಭಾಗವು ಇಂದು ಅಥವಾ ನಾಳೆ ಎಂಬುವ ರೀತಿಯಲ್ಲಿ ಕೈಬೀಸುತ್ತಿದೆ. ಮೊದಲೇ ಸರ್ಕಾರಿ ಶಾಲೆಗಳೆಂದರೆ ಕೆಲ ಪೋಷಕರ ಭಾವನೆಯಲ್ಲಿ ಗುಣಮಟ್ಟದ ಶಿಕ್ಷಣವಿಲ್ಲ. ಸ್ವಚ್ಛತೆ ಮತ್ತು ಭದ್ರತೆ ಇಲ್ಲ ಎಂದುಕೊಂಡಿದ್ದಾರೆ ಅದರ ನಡುವೆ ಇಂತಹ ವ್ಯವಸ್ಥೆ ನೋಡಿದರೆ ಅವರ ಭಾವನೆಗೆ ಮತ್ತಷ್ಟು ಪುಷ್ಟಿ ನೀಡುವಂತೆ ಮಾಕವಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಗೆ ಕಾಡುತ್ತಿದೆ.




ಬೀಳುವ ಸ್ಥಿತಿಯಲ್ಲಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಪ್ರತಿಯೊಂದು ಊರಿನಲ್ಲೂ ನಮ್ಮ ಸಂಸ್ಕಾರ ಸಂಸ್ಕೃತಿ ನೆಮ್ಮದಿ ಹೆಚ್ಚಿಸುವ ಕೇಂದ್ರ ಬಿಂದುಗಳಾದ ದೇವಾಲಯಗಳು ಆದರೆ ಮಾಕವಳ್ಳಿ ಗ್ರಾಮದಲ್ಲಿ ಮಾತ್ರ ದೇವಾಲಯಗಳಿಗೆ ಗ್ರಹಣ ಹಿಡಿದಂತೆ ಮುಜರಾಯಿ ಇಲಾಖೆಗೆ ಒಳಪಟ್ಟು ಗ್ರಾಮದಲ್ಲಿ ನೆಲೆಸಿರುವ ಇತಿಹಾಸವುಳ್ಳ ಶ್ರೀ ಆಂಜನೇಯ ಸ್ವಾಮಿ ದೇವಗುಲ ಸೇರದಂತೆ ಗ್ರಾಮದ ಅನೇಕ ದೇವಾಲಯಗಳು ಸಂಪೂರ್ಣ ಶಿಥಿಲಗೊಂಡು ಇಂದು ಅಥವಾ ನಾಳೆ ಧರೆಗೆ ಉರುಳುವ ಸ್ಥಿತಿಯಲ್ಲಿ ಇದ್ದರೆ ಉಳಿದ ದೇವಾಲಯಗಳು ಬಹುತೇಕ ಕಾಮಗಾರಿ ಮುಗಿದು ಹಲವು ವರ್ಷಗಳು ಕಳೆದರೂ ಜೀರ್ಣೋದ್ಧಾರಕ್ಕೆ ಸುವರ್ಣ ದಿನಗಳು ಮಾತ್ರ ಕೂಡಿ ಬಂದಿಲ್ಲ.

ಮುಗ್ಧ ಜನರ ಬಲಿಗಾಗಿ ಕಾದಿ ಕುಳಿತ ಅವ್ಯವಸ್ಥೆಯ ವಿದ್ಯುತ್ ಕಂಬಗಳು ಇತ್ತೀಚಿನ ದಿನಗಳಲ್ಲಿ ತಾಲ್ಲೂಕಿನಲ್ಲಿ ಬಹುತೇಕ ಮುಗ್ಧ ಸಾರ್ವಜನಿಕರು ವಿದ್ಯುತ್ ಸ್ಪರ್ಶಕ್ಕೆ ಸಾವಿಗಿಡಾಗಿರುವ ಘಟನೆ ಮತ್ತಷ್ಟು ಕೈಗನ್ನಡಿಯಾಗುವಂತೆ ಮಾಕವಳ್ಳಿ ಗ್ರಾಮದ ಪ್ರಮುಖ ಮುಖ್ಯರಸ್ತೆಯಲ್ಲಿ ಇರುವ ಹಲವು ವರ್ಷಗಳ ವಿದ್ಯುತ್ ಕಂಬಗಳು ಸಂಪೂರ್ಣ ತನ್ನ ಸತ್ವವನ್ನೇ ಕಳೆದುಕೊಂಡು ನೆಲದತ್ತ ಮುಖ ಮಾಡುತ್ತಿದೆ.

ಇದರ ಪರಿಣಾಮ ಪ್ರಮುಖ ರಸ್ತೆಯಲ್ಲಿ ಸಂಚಾರಿಸುವ ಮುಗ್ಧ ಜನರ ಸಾವಿನ ದವಡೆಯಲ್ಲಿ ಸಂಚಾರಿಸುವ ವಿಪರ್ಯಾಸ ನಿರ್ಮಾಣವಾಗಿದೆ. ಸತ್ವವಿಲ್ಲದ ಜಲಜೀವನ್ ಮಿಷನ್ ಕಾಮಗಾರಿ ಹಲವಾರು ವರ್ಷಗಳ ನಂತರ ಅಪರೂಪಕ್ಕೆ ಗ್ರಾಮದಲ್ಲಿ ನಡೆಯುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಮಹತ್ವಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಜಲಜೀವನ್ ಮಿಷನ್ ಕಾಮಗಾರಿಯು ಗ್ರಾಮ ಜನರ ಅನುಕೂಲವಾಗಲಿ ಎಂಬುವ ನಿಟ್ಟಿನಲ್ಲಿ ಒಂದು ಕೋಟಿಗು ಹೆಚ್ಚು ರೂ ವೆಚ್ಚದಲ್ಲಿ 340ಕ್ಕೂ ಹೆಚ್ಚು ಗ್ರಾಮದಲ್ಲಿ ವಾಸಿಸುತ್ತಿರುವ ಕುಟುಂಬಗಳ ಮನೆ ಮನೆಗೆ ಗಂಗೆಯ ಕಾಮಗಾರಿಯಲ್ಲಿ ಪೈಪ್‌ಲೈನ್ ಹಾಗೂ ಕೊಳಯಿ ಕನಿಷ್ಠ 35 ವರ್ಷ ಬಾಳಿಕೆ ಬರಬೇಕು ಎಂಬ ನಿಯಮವಿದೆ. ಆದರೆ ಈಗಾಗಲೇ ಅಳವಡಿಸಿರುವ ಪೈಪ್‌ಲೈನ್ ಹಾಗೂ ಕಾಮಗಾರಿ ಕನಿಷ್ಠ ಎರಡು–ಮೂರು ವರ್ಷ ಕೂಡ ಬಾಳಿಕೆ ಬಾರದಿರುವ ಸಾಮಗ್ರಿಗಳನ್ನ ಅಳವಡಿಸಿ ಗುತ್ತಿಗೆದಾರರ ಅನುಗುಣವಾಗಿ ಕಾಮಗಾರಿಗಳು ನಡೆಯುತ್ತಿದೆ ಆರೋಪಗಳು ಕೇಳಿ ಬರುತ್ತಿವೆ.

ಇದ್ದರೂ ಇಲ್ಲದಂತಿರುವ ಗ್ರಂಥಾಲಯ ಕೇಂದ್ರ ಮತ್ತು ರಾಜ್ಯ ಸರ್ಕಾರ ಗ್ರಾಮೀಣ ಪ್ರದೇಶದ ಪ್ರಜ್ಞಾವಂತರ ಮತ್ತಷ್ಟು ಜ್ಞಾನ ಹೆಚ್ಚಿಸಲು ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಡ್ಡಾಯವಾಗಿ ಗ್ರಂಥಾಲಯ ಬಳಕೆ ಆಗಬೇಕು ಎಂಬ ಆದೇಶವಿದ್ದರೂ ಮಾಕವಳ್ಳಿ ಗ್ರಾಮದಲ್ಲಿ ಗ್ರಂಥಾಲಯ ನಿರ್ವಹಿಸುವವರು ಇಲ್ಲದೆ ಪುಸ್ತಕ ಭಂಡಾರಗಳಿದ್ದು,ದಿನಪತ್ರಿಕೆಗಳನ್ನು ಸಹ ತರಿಸುತ್ತಿಲ್ಲ ಎಂಬ ಆರೋಪವೂ ಇದೆ.ಗ್ರಾಮೀಣ ಪ್ರದೇಶದಲ್ಲಿ ಇತ್ತೀಚಿಗೆ ವಿದ್ಯಾವಂತರ ಸಂಖ್ಯೆ ಹೆಚ್ಚುತ್ತಿದೆ. ರಾಷ್ಟ್ರದ ಹಾಗೂ ರಾಜ್ಯದ ಸಂಸ್ಕೃತಿ, ಇತಿಹಾಸ, ಪರಂಪರೆ, ಕಲೆ, ವಿಜ್ಞಾನ ಹಾಗೂ ಇತರ ಹತ್ತಾರು ವಿಷಯಗಳ ಬಗ್ಗೆ ಅರಿಯಲು ಅವರಲ್ಲಿ ಬೇರೆ–ಬೇರೆ ಪುಸ್ತಕಗಳನ್ನು ಓದುವ ಅಭಿರುಚಿ ಬೆಳೆಸಿಕೊಳ್ಳಲು ಗ್ರಂಥಾಲಯಗಳು ಉಪಯೋಗವಾಗುವ ಗ್ರಂಥಾಲಯ ಇದ್ದರು ಇಲ್ಲದಂತೆ ಕಣ್ಮರೆಯಾಗಿರುವುದು ಗ್ರಾಮದ ಪ್ರಜ್ಞಾವಂತರ ಆಕ್ರೋಶಕ್ಕೆ ಕಾರಣವಾಗುತ್ತಿದೆ.

ಬಸ್ ತಂಗುದಾಣ ಇಲ್ಲದ ಗ್ರಾಮ 30ಕ್ಕೂ ಹೆಚ್ಚು ವರ್ಷಗಳ ಹಿಂದೆ ಗ್ರಾಮದಲ್ಲಿ ನಿರ್ಮಾಣವಾಗಿದ್ದ ಬಸ್ ತಂಗುದಾಣ ಶೀಥಿಲಗೊಂಡ ಕಟ್ಟಡ ಅಪಾಯಕಾರಿ ಎಂದು ದೂರ ದೃಷ್ಟಿಯಿಂದ ಕಳೆದ ಮೂರು ವರ್ಷದ ಹಿಂದೆ ಸ್ಥಳೀಯ ಗ್ರಾಮ ಪಂಚಾಯಿತಿ ತೆರವುಗೊಳಿಸಿತು. ಆದರೆ ಮತ್ತೆ ಪುನರ್ ನಿರ್ಮಾಣದ ಭಾಗ್ಯ ಮಾತ್ರ ದೊರಕಿಲ್ಲ ಪ್ರತಿನಿತ್ಯ ಶಾಲಾ ಕಾಲೇಜಿಗೆ ತೆರಳುವ ಮಕ್ಕಳಿಗೆ ಬಾರಿ ತೊಂದರೆ ಅದರಲ್ಲೂ ಮಳೆಗಾಲದಲ್ಲಿ ಖಾಸಗಿ ಅಂಗಡಿ ಮುಂಗಟ್ಟುಗಳ ಮುಂದೆ ನಿಂತು ಪ್ರಯಾಣ ಮಾಡುವ ಪರಿಸ್ಥಿತಿ ಎದುರಾಗಿದೆ ಎಂದು ಕೇಳಿ ಬರುತ್ತಿದೆ.

ವಿಶೇಷ ವರದಿ
ಮನು ಮಾಕವಳ್ಳಿ

## ಶಾಸಕ ಹೆಚ್.ಟಿ.ಮಂಜು ಅಭಿಪ್ರಾಯ



ಮಾಕವಳ್ಳಿ ಗ್ರಾಮದ ಸಂಪೂರ್ಣ ಸಮಸ್ಯೆ ನನಗೂ ಹರಿವು ಇದೆ ಪ್ರಸ್ತುತ ಸರ್ಕಾರ ಬಿಟ್ಟಿ ಭಾಗ್ಯಗಳ ಯೋಜನೆಗಳಿಂದ ಅಭಿವೃದ್ಧಿ ಕಾರ್ಯಕ್ರಮ ಕುಂಠಿತವಾದರೂ ನನ್ನ ಹೋರಾಟದಿಂದ ಈಗಾಗಲೇ ಆ ಗ್ರಾಮಕ್ಕೆ ಅಭಿವೃದ್ಧಿಗಾಗಿ ಅನುದಾನ ನೀಡಿದ್ದೇನೆ ಆ ಮಾದರಿಯಲ್ಲಿ ಮುಂದಿನ ದಿನಗಳಲ್ಲಿ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ.



ಯುವ ಮುಖಂಡ ಅನಿಲ್ ಗೌಡ ಅಭಿಪ್ರಾಯ ನಮ್ಮ ಗ್ರಾಮದ ಬಹುತೇಕ ಪ್ರಜ್ಞಾವಂತರ ಪ್ರಶ್ನೆ ಹತ್ತಾರು ವರ್ಷಗಳಿಂದ ಪ್ರಶ್ನೆಯಾಗಿ ಉಳಿದಿದೆ ಏಕೆಂದರೆ ಮಾಕವಳ್ಳಿ ಗ್ರಾಮ ಒಂದು ಕುಗ್ರಾಮವಲ್ಲ ಗ್ರಾಮ ಪಂಚಾಯಿತಿ ಮತ್ತು 1990 ರಲ್ಲೆ ಕೋರಮಂಡಲ ಸಿಕ್ಕರೆ ಕಾರ್ಖಾನೆ ನಿರ್ಮಾಣಗೊಂಡ ಕಾರ್ಖಾನೆ ಒಳಪಟ್ಟ ಒಂದು ವಾಣಿಜ್ಯ ಗ್ರಾಮವಾಗಿ ಮಾರ್ಪಟ್ಟಿರುವ ಗ್ರಾಮ ಆದ್ರೆ ಅಭಿವೃದ್ಧಿಯಲ್ಲಿ ಮಾತ್ರ ಸ್ವತಂತ್ರ ದಿನಗಳಿಂದಲೂ ಹಿಂದಿನವರೆಗೂ ಕುಂಟಿತಗೊಂಡಿರುವ ಕಾರಣವೇನು ಮಾತ್ರ ತಿಳಿದುಬಂದಿಲ್ಲ. ಗ್ರಾಮ ಪಂಚಾಯಿತಿಗೆ ಆಗಮಿಸುವ ಪ್ರತಿಯೊಬ್ಬ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ (ಪಿಡಿಓ )ಪ್ರಸ್ತುತ ದಿನಗಳಲ್ಲಿರುವ ಅಧಿಕಾರಿ ಶೈಲಜಾ ಅವರು ಒಳಗೊಂಡಂತೆ ಕೋರಮಂಡಲ ಸಕ್ಕರೆ ಕಾರ್ಖಾನೆ ತೆರಿಗೆ ವಿಚಾರದಲ್ಲಿ ಕಾರ್ಖಾನೆ ಆಡಳಿತ ಮಂಡಳಿಯ ಕೈಗೊಂಬೆಯಂತೆ ಹಾಗೂ ಗ್ರಾಮದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಗ್ರಾಮ ಪಂಚಾಯತಿ ಗ್ರಾ.ಪಂ ಸದಸ್ಯರುಗಳ ವಿಶ್ವಾಸಕ್ಕೆ ತೆಗೆದುಕೊಳ್ಳದೆರುವುದೇ ಗ್ರಾಮ ಪಂಚಾಯತಿ ಸದಸ್ಯರಲ್ಲಿ ವೈಮನಸ್ಸು ಬಂದು ಗ್ರಾಮದಲ್ಲಿ ಅಭಿವೃದ್ಧಿ ಕೆಲಸಗಳು ಕುಂಟಿತಕ್ಕೆ ಕಾರಣ.

# ಚಿಕ್ಕತಿರುಪತಿ ದೇವಾಲಯಕ್ಕೆ ಮುಜರಾಯಿ ಸಚಿವ ರಾಮಲಿಂಗರೆಡ್ಡಿ ಭೇಟಿ: ಕಾಮಗಾರಿ ವೀಕ್ಷಣೆ

ಮಾಲೂರು: ತಾಲ್ಲೂಕಿನ ಚಿಕ್ಕತಿರುಪತಿಯ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಾಲಯಕ್ಕೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ರವರು ಭೇಟಿ ನೀಡಿ ರಥಬೀದಿಯಲ್ಲಿ ನಡೆಯುತ್ತಿರುವ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಯನ್ನು ವೀಕ್ಷಣೆ ಮಾಡಿದರು. ತಾಲ್ಲೂಕಿನ ಚಿಕ್ಕತಿರುಪತಿ ಗ್ರಾಮದ ಓಂಕಾರೇಶ್ವರ ಸ್ವಾಮಿ ಮತ್ತು ಶನೈಶ್ಚರಸ್ವಾಮಿ ದೇವಾಲಯದಲ್ಲಿ ನಡೆಯುತ್ತಿರುವ ಶನೈಶ್ಚರಸ್ವಾಮಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದ ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗರೆಡ್ಡಿ ಅವರು ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾಲೂರು ಶಾಸಕರಾದ ಕೆ ವೈ ನಂಜೇಗೌಡ ರವರು ಜೊತೆಯಲ್ಲಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗರೆಡ್ಡಿ ಅವರು, ಸ್ಥಳೀಯ ಶಾಸಕ ನಂಜೇಗೌಡ ಅವರು ನನ್ನ ಭೇಟಿ ಮಾಡಿ ಚಿಕ್ಕತಿರುಪತಿಯ ರಥಬೀದಿಯಲ್ಲಿ ಸಿಸಿ ರಸ್ತೆ ನಿರ್ಮಾಣ ಮಾಡುವಂತೆ ಮನವಿ ಮಾಡಿದ್ದರು. ಅದರಂತೆ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ, ಈಗಾಗಲೇ ಈ ರಸ್ತೆಯ ಕಾಮಗಾರಿ ಶೇ 90 ರಷ್ಟು ಮುಗಿದಿದೆ, ತಿಂಗಳೊಳಗಾಗಿ ಕಾಮಗಾರಿಯು ಪೂರ್ಣಗೊಳ್ಳಲಿದೆ ಎಂದರು.



ದೇವಾಲಯದಲ್ಲಿ ಗರ್ಭಗುಡಿಯ ಕಟ್ಟಡ ಬಿರುಕು ಕಾಣಿಸಿಕೊಂಡಿದೆ ಸರಿಪಡಿಸುವಂತೆ ಈ ದೇವಾಲಯದ ಅರ್ಚಕರು ಮನವಿ ಮಾಡಿದ್ದಾರೆ. ಅದರಂತೆಯೇ ನಮ್ಮ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು. ಶಾಸಕ ಕೆ.ವೈ ನಂಜೇಗೌಡ ಅವರು ಮಾತನಾಡಿ ಚಿಕ್ಕತಿರುಪತಿ ಗ್ರಾಮ ಒಂದು ಪ್ರಸಿದ್ಧ ಯಾತ್ರಾ ಸ್ಥಳವಾಗಿದ್ದು, ಇಲ್ಲಿ ಪ್ರತಿ ವರ್ಷವು ಜಾತ್ರಾ ಮಹೋತ್ಸವದ ನಡೆಯುತ್ತದೆ. ಬ್ರಹ್ಮರಥೋತ್ಸವವು ಸಹ ವಿಶೇಷವಾಗಿದ್ದು, ರಥ ಸಾಗುವ ಮಾರ್ಗಕ್ಕೆ ಸಿಸಿ ರಸ್ತೆ ನಿರ್ಮಾಣ ಮಾಡಬೇಕು ಎಂಬುದು ಸ್ಥಳೀಯರು ಮುಖಂಡರ ಮನವಿ ಮಾಡಿದ್ದರು. ಈ ಹಿಂದೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅಂದಿನ ಮುಜರಾಯಿ ಸಚಿವರಾದ ಟಿ.ಬಿ. ಜಯಚಂದ್ರರವರು ರಾಜಗೋಪುರ ನಿರ್ಮಾಣಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ಸುಮಾರು 3 ಕೋಟಿ ರೂಪಾಯಿ ವೆಚ್ಚದಲ್ಲಿ ದೇವಸ್ಥಾನದ ರಥಬೀದಿಯ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಸಚಿವರಾದ ರಾಮಲಿಂಗಾರೆಡ್ಡಿ ಅವರು ಅನವು ಮಾಡಿಕೊಟ್ಟಿರುತ್ತಾರೆ. ಮುಂದಿನ ದಿನಗಳಲ್ಲಿ ದೇವಸ್ಥಾನ ಕಾಂಪೌಂಡ್ ಸೇರಿದಂತೆ ದೇವಸ್ಥಾನಕ್ಕೆ ಆಗಬೇಕಿರುವ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಲಕ್ಷ್ಮೀನಾರಾಯಣ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಧುಸೂದನ್, ಚಿಕ್ಕತಿರುಪತಿ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಮಪ್ರಸಾದ್, ಕೆ.ಜಿ ಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸತೀಶ್ ರಾಜಣ್ಣ, ದರಖಾಸ್ತು ಸಮಿತಿ ಸದಸ್ಯರಾದ ವೀರಭದ್ರಪ್ಪ ಆನೇಪುರ ಹನುಮಂತಪ್ಪ, ಸದಸ್ಯರಾದ ಜಿ.ವಿ.ಮಂಜುನಾಥ್, ರಾಘವೇಂದ್ರ ಪ್ರಸಾದ್, ಎ.ಎಂ.ನಾರಾಯಣಪ್ಪ, ಗೊಲ್ಲಹಳ್ಳಿ ವೆಂಕಟೇಶ್, ಪಿಡಿಒ ಹರೀಂದ್ರಗೋಪಾಲ್, ಮುಖಂಡರಾದ ಬಾಳಿಗಾನಹಳ್ಳಿ ಶ್ರೀನಿವಾಸ್, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವರದಿ: ಗೋಪಾಲಕೃಷ್ಣ, ಮಾಲೂರು (ಕೋಲಾರ)

# ಎನ್‌ಡಿಎ ಮೈತ್ರಿ ಸಭೆಯ ಬಳಿಕ ದೆಹಲಿಯಿಂದ ಹಿಂದಿರುಗಿದ ಎಚ್‌ಡಿ ಕುಮಾರಸ್ವಾಮಿ; ಸಚಿವ ಸ್ಥಾನ ಬೇಡ!



ಎನ್‌ಡಿಎ ಮೈತ್ರಿ ಸಭೆ ಬಳಿಕ ದೆಹಲಿಯಿಂದ ಹಿಂದಿರುಗಿದ ಮಂಡ್ಯ ಸಂಸದ ಎಚ್‌ಡಿ ಕುಮಾರಸ್ವಾಮಿ ಅವರು ನನಗೆ ಸಚಿವ ಸ್ಥಾನ ಮುಖ್ಯ ಅಲ್ಲ ಎಂದಿದ್ದಾರೆ. ಮುಂದಿವರೆದು, ಜನರ ಕಷ್ಟಗಳಿಗೆ ದನಿಯಾಗುವುದೇ ನನ್ನ ಮುಖ್ಯ ಉದ್ದೇಶ ಎಂದಿದ್ದಾರೆ. ಬೆಂಗಳೂರಿನಲ್ಲಿ ಗುರುವಾರ ಮಾಧ್ಯಮಗಳ ಜತೆ ಮಾತನಾಡಿದ ನೂತನ ಸಂಸದರು, ದೆಹಲಿಗೆ ಹೋಗಿ ಸಚಿವನಾಗುವುದಕ್ಕಿಂತ ನಾಡಿನ ಜನತೆಯ ಸಮಸ್ಯೆಗೆ ಪರಿಹಾರ ನೀಡಬೇಕು. ನೀರಾವರಿ ವಿಷಯದಲ್ಲಿ ನ್ಯಾಯ ಪಡೆಯಬೇಕು. ಮಂತ್ರಿ ಸ್ಥಾನ ಅನಂತರದ ಮಾತು. ನನ್ನ ಕಡೆಯಿಂದ ಕೇಂದ್ರಕ್ಕೆ ಯಾವ ಮುಜುಗರವೂ ಇರುವುದಿಲ್ಲ. ಮೈತ್ರಿ ಧರ್ಮ ಪಾಲನೆ ಮಾಡುತ್ತೇವೆ. ರಾಜ್ಯದ ಎಲ್ಲಾ ಸಂಸದರ ಜತೆ ಒಟ್ಟಾಗಿ ಕೆಲಸ ಮಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತೇವೆ ಎಂದರು.

# ನೈಋತ್ಯ ಶಿಕ್ಷಕರ ಕ್ಷೇತ್ರದಲ್ಲಿ ಜಯಗಳಿಸಿದ ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ ಹೇಳಿಕೆ



ಈ ಬಾರಿ ಮೊದಲ ಪ್ರಾಶಸ್ತ್ಯ ಮತಗಳಲ್ಲೇ ಬಹಳ ಅಭೂತಪೂರ್ವ ಗೆಲುವನ್ನು ತಂದು ಕೊಟ್ಟಿದ್ದಾರೆ. ಹಾಗಾಗಿ ಈ ಗೆಲುವನ್ನು ಶಿಕ್ಷಕ ಸಮುದಾಯಕ್ಕೆ ಸರ್ಮಪಿಸುತ್ತೇನೆ. ನಮ್ಮ ಶಿಕ್ಷಕರು ಬಹಳ ಶ್ರಮಪಟ್ಟು ಗೆಲುವನ್ನು ತಂದುಕೊಟ್ಟಿದ್ದಾರೆ. ಬಹಳ ವಿಶ್ವಾಸವಿಟ್ಟು ಮೊದಲ ಪ್ರಾಶಸ್ತ್ಯ ಮತಗಳನ್ನು ನೀಡಿ ಗೆಲ್ಲಿಸಿದ್ದಾರೆ. ಹಾಗಾಗಿ ನನ್ನ ಗೆಲುವನ್ನು ಅವರಿಗೆ ಅರ್ಪಿಸುತ್ತೇನೆ. ಈ ಚುನಾವಣೆಯಲ್ಲಿ ನೂರಕ್ಕೆ ನೂರರಷ್ಟು ಗೆಲ್ಲುವ ವಿಶ್ವಾಸವಿತ್ತು, ಅದರಂತೆಯೇ ಆಗಿದೆ. ಬಿಜೆಪಿ–ಜೆಡಿಎಸ್ ಮೈತ್ರಿ ಒಂದಾಗಿದ್ದರಿಂದ ನಮ್ಮ ಬಲ ಹೆಚ್ಚಾಗಿದೆ. ಹೊಂದಾಣಿಕೆ ಕೆಲಸ ಮಾಡಿದೆ. ಕಳೆದ ಬಾರಿಯೇ ನಾನು ಜೆಡಿಎಸ್ ನಿಂದ ಏಕಾಂಗಿಯಾಗಿ ನಿಂತು ಗೆದ್ದಿದ್ದೆ. ಈ ಬಾರಿ ಬಿಜೆಪಿ ಜೊತೆಗಿನ ಹೊಂದಾಣಿಕೆಯಿಂದ ಬಲ ಇನ್ನಷ್ಟು ಹೆಚ್ಚಿದೆ. ಬಿಜೆಪಿ ಜೆಡಿಎಸ್ ಮೈತ್ರಿ ಫಲಪ್ರದವಾಗಿದೆ. ಬಿಜೆಪಿ ಜೆಡಿಎಸ್‌ನ ಎಲ್ಲಾ ಹಿರಿಯ ನಾಯಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನೈಋತ್ಯ ಶಿಕ್ಷಕರ ಕ್ಷೇತ್ರದಲ್ಲಿ ಜಯಗಳಿಸಿದ ಬಳಿಕ ಜೆಡಿಎಸ್ ನ ಎಸ್ ಎಲ್ ಭೋಜೇಗೌಡ ಹೇಳಿಕೆ.

# ಕುಮಾರಸ್ವಾಮಿ ಜಯದ ಹಿನ್ನಲೆಯಲ್ಲಿ ಮನೆ ಮನೆಗೆ ಸಿಹಿ ವಿತರಣೆ

ಮದ್ದೂರು: ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಅವರು ಅಭೂತಪೂರ್ವ ಅಂತರ ಮತಗಳಿಂದ ಜಯಗಳಿಸಿದ ಹಿನ್ನೆಲೆಯಲ್ಲಿ ತಾಲೂಕಿನ ಚುಂಚೇಗೌಡನದೊಡ್ಡಿ ಗ್ರಾಮದಲ್ಲಿ ಗ್ರಾ.ಪಂ ಮಾಜಿ ಸದಸ್ಯ ಸಿ.ಎನ್. ನಾಗೇಶ್ ಅವರ ನೇತೃತ್ವದಲ್ಲಿ ಪ್ರತಿ ಮನೆ ಮನೆಗೂ ವಿವಿಧ ರಿತೀಯ ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ಮಾಡಲಾಯಿತು.

ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಚುಂಚೇಗೌಡನದೊಡ್ಡಿ ಸಿ.ಎನ್. ನಾಗೇಶ್ ಅವರು ಮಾತನಾಡಿ, ನೂತನ ಸಂಸದರಾದ ಎಚ್.ಡಿ. ಕುಮಾರಸ್ವಾಮಿ ಅವರು ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಅಭೂತಪೂರ್ವ ಜಯಗಳಿಸಿದ್ದಾರೆ. ಜಿಲ್ಲೆಯ ಪ್ರತಿಯೊಂದು ಬೂತ್ ನಲ್ಲೂ ಕಾಂಗ್ರೆಸ್ ಅಭ್ಯರ್ಥಿಗಿಂತ ಮೈತ್ರಿ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಅಧಿಕ ಮತಗಳು ಚಲಾವಣೆಯಾಗಿರುವುದು ಕುಮಾರಸ್ವಾಮಿಯವರ ಮೇಲಿನ ಅಭಿಮಾನವನ್ನು ತೋರ್ಪಡಿಸುತ್ತದೆ. ಅಭಿವೃದ್ಧಿಯ ಚಿಂತಕರಾಗಿರುವ ಎಚ್.ಡಿ. ಕುಮಾರಸ್ವಾಮಿ ಅವರಿಂದ ಮಂಡ್ಯ ಜಿಲ್ಲೆಯ ಸಮಗ್ರ ಅಭಿವೃದ್ಧಿ ಆಗಲಿದೆ. ಅಲ್ಲದೆ ಕೇಂದ್ರದಲ್ಲಿ ಎನ್.ಡಿ.ಎ ನೇತೃತ್ವದಲ್ಲಿ ಸರ್ಕಾರ ರಚನೆಯಾಗುತ್ತಿದ್ದು, ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರದಲ್ಲಿ ಸಂಪುಟ ದರ್ಜೆ ಸಚಿವರಾಗಲಿದ್ದಾರೆ. ಆ ಮೂಲಕ ರಾಜ್ಯ ಮತ್ತು ಮಂಡ್ಯ ಜಿಲ್ಲೆಯನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಎಚ್.ಡಿ. ಕುಮಾರಸ್ವಾಮಿ ಅವರು ವ್ಯಕ್ತಿಯಲ್ಲ ಶಕ್ತಿಯಾಗಿದ್ದು, ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ರಾಜ್ಯಕ್ಕೆ ಅನೇಕ ಕೊಡುಗೆಗಳನ್ನು ಕೊಟ್ಟಿದ್ದು ಇಂದಿಗೂ ಜನ ಮಾನಸದಲ್ಲಿ ಮನೆ ಮಾಡಿವೆ. ಕುಮಾರಸ್ವಾಮಿಯವರು ಮಂಡ್ಯ ಜಿಲ್ಲೆಯ ಸಂಸದರಾಗುವ ಮೂಲಕ ಇತಿಹಾಸ ಸೃಷ್ಟಿಸಿದ್ದು, ಕಾವೇರಿ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲಿದ್ದಾರೆ ಎಂಬ ಭರವಸೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕುಮಾರಸ್ವಾಮಿಯವರ ಅಭಿಮಾನಿ ಸಿ.ಎನ್. ನಾಗೇಶ್, ಜೆಡಿಎಸ್ ಮುಖಂಡರಾದ ಯಶವಂತ್, ರಘು, ರವಿ, ದೀಪ ಚಂದ್ರಶೇಖರ್, ಜಿಕೆ ಬೇಕರಿ ಗೋವಿಂದ, ರಾಮಕೃಷ್ಣ ಸೇರಿದಂತೆ ಇತರರಿದ್ದರು.



*ಮಂಡ್ಯ ಲೋಕಸಭಾ ಚುನಾವಣೆಯಲ್ಲಿ ಮೈತ್ರಿಯ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಅವರು ಜಯಗಳಿಸಿದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಸಿ.ಎನ್. ನಾಗೇಶ್ ರವರ ನೇತೃತ್ವದಲ್ಲಿ ಪ್ರತಿ ಮನೆ ಮನೆಗೆ ಸಿ.ಹಿ ಹಂಚಿ ಸಂಭ್ರಮಿಸಲಾಯಿತು.*

# ವಿಶ್ವ ಪರಿಸರ ದಿನಾಚರಣೆ



ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಕಾನ್ಲೆ ಗ್ರಾಮದಲ್ಲಿ ಜಿಲ್ಲಾ ಕಾನೂನು ಪ್ರಾಧಿಕಾರ ವಕೀಲರ ಸಂಘ .ಹಾಗೂ ಸಾಗರ ಉಪವಿಭಾಗ ಅರಣ್ಯ ಇಲಾಖೆಯ ಸಹಭಾಗಿತ್ವದಲ್ಲಿ ಸಾಗರ ತಾಲೂಕಿನ ಕಾನ್ಲೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಾಲಯಿತು..

ಈ ಕಾರ್ಯಕ್ರಮವನ್ನು ಶಿವಮೊಗ್ಗ ಜಿಲ್ಲಾ ನ್ಯಾಯಾಧೀಶರಾದ ಸಂತೋಷ ಎಂ ಎಸ್ ಗಿಡಗಳನ್ನು ನಡುವುದರ ಮೂಲಕ ಚಾಲನೆ ನೀಡಿದರು.. ಜನ .ವನ.ಅರಣ್ಯ ಎಂಬ ವಿಶೇಷ ರೀತಿಯಲ್ಲಿ ಅರಣ್ಯ ರಕ್ಷಣೆ ವನಗಳನ್ನು ಅಭಿವೃದ್ಧಿ ಮಾಡುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ ವಾಗಿದೆ ಎಂದರು ಈಗೀನ ಪೀಳಿಗೆಯ ಮಕ್ಕಳಿಗೆ ಮರಗಿಡಗಳನ್ನು ಬೆಳೆಸಿ ಅದರ ಪೋಷಣೆ ಮಾಡುವುದನ್ನು ಕಲಿಸಬೇಕು ಹಾಗೆಯೆ ಪ್ರತಿಯೊಬ್ಬ ವ್ಯಕ್ತಿಯೂ ಅವರವರ ಜಾಗದಲ್ಲಿ ಗಿಡಗಳನ್ನು ನೆಟ್ಟು ಹಸಿರಿಕರಣ ಮಾಡಬೇಕಾಗಿದೆ.ಗೀಡಗಳು ಇಂಗಾಲದ ಡೈಆಕ್ಸೈಡ್ ತೆಗೆದುಕೊಂಡು ನಮಗೆ ಶುದ್ಧ ಆಮ್ಲಜನಕ ನೀಡುತ್ತವೆ ಹಾಸ್ಪಿಟಲ್ ಗಳಲ್ಲಿ ನಾವು ಆಮ್ಲಜನಕ ದುಡ್ಡು ಕೊಟ್ಟು ಕರೀದಿ ಮಾಡುವ ಕಾಲ ಇದಾಗಿದೆ ಅದನ್ನು ನಾವು ಮನಗೊಂಡು ಪ್ರತಿ ನಾಗರೀಕರು ಗಿಡಗಳನ್ನು ನೆಟ್ಟು ಅದನ್ನು ಪಾಲನೆ ಪೋಷಣೆ ಮಾಡಬೇಕಾಗಿದೆ ಎಂದರು.. ಸಾಗರ ಉಪವಿಭಾಗ ಅರಣ್ಯ ಅಧಿಕಾರಿ ಸಂತೋಷ ಕುಮಾರ ಮಾತಾನಾಡಿ ನಮ್ಮ ರಾಜ್ಯದಲ್ಲಿ ಮಲೆನಾಡಿನಲ್ಲಿ ಕಳೆದ ವರ್ಷದ ಮಳೆಯ ತೀವ್ರತೆ ಗಮನಿಸಿದರೆ ನಾವು ಇ ವರ್ಷವು ಕೊಡಾ ಅದೇ ಪರಿಸ್ಥಿತಿ ಕಾಣಬೇಕಾಗಿದೆ ಅದ್ದರಿಂದ ಶಾಲೆಯಲ್ಲಿ ತಮ್ಮ ತಮ್ಮ ಮನೆಗಳಲ್ಲಿ ಗಿಡಗಳನ್ನು ಅತೀ ಹೆಚ್ಚು ಬೇಳೆಸಬೇಕಾಗಿದೆ.ಗ್ರಾಮಗಳಲ್ಲಿ ಸೊಪ್ಪಿನ ಬೆಟ್ಟ ಗಳನ್ನು ರಕ್ಷಣೆ ಮಾಡಬೇಕು ಹಾಗೂ ಇತ್ತೀಚಿನ ದಿನಗಳಲ್ಲಿ ರೈತರು ಅರಣ್ಯ ವತ್ತುವರಿ ಮಾಡ್ತಾ ಇರುವುದು ಕಂಡು ಬಂದಿದ್ದು ಅದನ್ನು ನಿಲ್ಲಿಸಿ ಮರಕಡಿತಲೆಗಳನ್ನು ನಿಲ್ಲಿಸಿ ಅರಣ್ಯ ರಕ್ಷಣೆ ಮಾಡುವಲ್ಲಿ ಅವರು ಸಹಕಾರ ನೀಡಿಬೇಕು ಎಂದರು..

ಕಾರ್ಯಕ್ರಮದಲ್ಲಿ .ವೆಂಕಟೇಶ್ ನ್ಯಾಯಾಧೀಶರು ಸಾಗರ.ದೀಪಾ ಕೆ.ಆರ್ ನ್ಯಾಯಾಧೀಶರು ಸಾಗರ.ಶ್ರೀ ಶೈಲ ಭೀಮಸೇನ ಬಾಗಡಿ. ಸ್ಪರ್ಶ ಎಂ ಡಿಸೋಜ.ರಮೇಶ್ ಹೆಚ್.ಬಿ.ಶಿರುವಾಳ.ಮೋಹನ್ ( ಚಿಧಿಜಿ ) ಸಾಗರ.ಅರವಿಂದ ರೇಂಜರ್ ಸಾಗರ ಹಾಗು ಅರಣ್ಯ ಇಲಾಖೆಯ ಅಧಿಕಾರಿಗಳು ಶಾಲಾ ವಿದ್ಯಾರ್ಥಿಗಳು ಹಾಜರಿದ್ದರು...

ಸ್ವಾಗತ.ಸುರೇಶ್. ಪ್ರಸ್ತಾವಿಕ..ಅರವಿಂದ ( ರೆಂಜರ್ ಸಾಗರ) ನಿರೂಪಣೆ.. ಸಂತೋಷ. ಪಾರೇಸ್ಟರ್ ತಾಳಗುಪ್ಪ ಮಾಡಿದರು..

ವರದಿ: ರಾಘವೇಂದ್ರ ತಾಳಗುಪ್ಪ

# ಭವಾನಿ ರೇವಣ್ಣ ಬಂಧನಕ್ಕೆ ವಾರಂಟ್

ಲೈಂಗಿಕ ದೌರ್ಜನ್ಯದ ಸಂತ್ರಸ್ತೆಯ ಅಪಹರಣ ಪ್ರಕರಣದಲ್ಲಿ ಪೊಲೀಸರ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿರುವ ಭವಾನಿ ರೇವಣ್ಣ ಅವರ ಬಂಧನಕ್ಕೆ ನ್ಯಾಯಾಲಯ ವಾರಂಟ್ ಜಾರಿ ಮಾಡಿದೆ. ಪ್ರಕರಣದಲ್ಲಿ ಬಂಧನ ಭೀತಿಯಿಂದಾಗಿ ಭವಾನಿ ಅವರು ಸಲ್ಲಿಸಿದ್ದ



ನಿರೀಕ್ಷಣಾ ಜಾಮೀನು ಅರ್ಜಿಯನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಮೇ 31ರಂದು ವಜಾಗೊಳಿಸಿತ್ತು. ಅದರ ಬೆನ್ನಲ್ಲೇ ಎಸ್‌ಐಟಿ ಅಧಿಕಾರಿಗಳು ಭವಾನಿ ಅವರಿಗೆ ನೋಟಿಸ್ ಜಾರಿ ಮಾಡಿ, ಜೂನ್ 1ಕ್ಕೆ ವಿಚಾರಣೆ ನಿಗದಿಪಡಿಸಿದ್ದರು. ವಿಚಾರಣೆ ನಡೆಸಲು ಎಸ್‌ಐಟಿ ಅಧಿಕಾರಿಗಳು ಹೊಳೆನರಸೀಪುರದಲ್ಲಿನ ಭವಾನಿ ಅವರ ನಿವಾಸಕ್ಕೂ ಹೋಗಿದ್ದರು.

ಆದರೆ, ಭವಾನಿ ಬಂಧನ ಭೀತಿಯಿಂದಾಗಿ ತಲೆಮರೆಸಿಕೊಂಡಿದ್ದರು. ಭವಾನಿ ಅವರು ಕಳೆದೊಂದು ತಿಂಗಳಿಂದ ಯಾರ ಸಂಪರ್ಕಕ್ಕೂ ಸಿಗದೆ ಅಜ್ಞಾತರಾಗಿದ್ದಾರೆ. ಮೇ 4ರಂದು ಸಂತ್ರಸ್ತೆಯರ ಸ್ಥಳ ಮಹಜರಿನ ವೇಳೆ ಹೊಳೆನರಸೀಪುರ ಮನೆಯಲ್ಲಿ ಅವರು ಹಾಜರಿದ್ದರು. ಆ ನಂತರ ಮೇ 6ರಂದು ಅದೇ ಮನೆಯಲ್ಲಿ ಜಿಲ್ಲೆಯ ಜೆಡಿಎಸ್ ಶಾಸಕರು ಮತ್ತು ಮಾಜಿ ಶಾಸಕರು ಅವರನ್ನು ಭೇಟಿಯಾಗಿದ್ದರು. ಬಳಿಕ ಹೊಳೆನರಸೀಪುರ ಮನೆಯಿಂದ ಹೊರ ಹೋಗಿದ್ದ ಅವರು ಯಾರ ಸಂಪರ್ಕಕ್ಕೂ ಸಿಕ್ಕಿಲ್ಲ.

# ಪತ್ರಿಕಾ ಪ್ರಕಟಣೆ



ಪಿರ್ಯಾದುದಾರರಾದ ಶ್ರೀ ಅಸೀಖ್ ಬಿನ್ ಬಸೀರ್, 32 ವರ್ಷ ವಾಸ ಎಸ್.ಎನ್ ನಗರ, ಸಾಗರ ಟೌನ್ ರವರ ಸ್ನೇಹಿತರಾದ ತೋಹಿದ್ ಅಬ್ದುಲ್ ರವರಿಗೆ ಸೇರಿದ ಸಾಗರ ತಾಲ್ಲೂಕ್ ಕಸಬಾ ಹೋಬಳಿ ಬಳಸಗೋಡು ಗ್ರಾಮದ ಜಮೀನಿನ ಆರ್.ಟಿ.ಸಿ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಸಾಗರ ತಾಲ್ಲೂಕ್ ಕಛೇರಿಯ ಭೂಮಿ ಕೇಂದ್ರಕ್ಕೆ ಹೋಗಿ 1999 ರಿಂದ 2001 ರ ವರೆಗೆ ಕೈ ಬರಹದ ಪಹಣೆಯನ್ನು ತೆಗೆಸಿಕೊಂಡು ಬರಲು ಪಿರ್ಯಾದಿಗೆ ತಿಳಿಸಿದ್ದರಿಂದ ಪಿರ್ಯಾದಿ ಅವರ ಸ್ನೇಹಿತರಾದ ನವೀನ.ಜಿ ರವರೊಂದಿಗೆ ದಿನಾಂಕ: 05/06/2024ರಂದು ಸಾಗರ ತಾಲ್ಲೂಕ್ ಕಛೇರಿಯ ದಾಖಲಾತಿ ವಿಭಾಗಕ್ಕೆ ಹೋಗಿ ಅಟೆಂಡರ್ ಬಸವರಾಜ್ ರವರಿಗೆ ದಾಖಲಾತಿಗಳನ್ನು ನೀಡಲು ಅರ್ಜಿಯನ್ನು ಸಲ್ಲಿಸಿದ್ದು ಅಟೆಂಡರ್ ಎಲ್ಲಾ ದಾಖಲಾತಿಗಳನ್ನು ಜೆರಾಕ್ಸ್ ಮಾಡಿಸಬೇಕು, ಚಲನ್ ಕಟ್ಟಬೇಕು ಖರ್ಚು ಇದೆ ಎಂದು ಪಿದ್ಯಾದಿಯಿಂದ ಒಟ್ಟು 1500/– ಸಾವಿರ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದೇ ದಿವಸ ಮದ್ಯಾಹ್ನ 1,500/–ಗಳನ್ನು ಪಿದ್ಯಾದಿಯಿಂದ ಲಂಚದ ಹಣವನ್ನು ಪಡೆದಿರುತ್ತಾರೆ. ಪುನಃ ಅಟೆಂಡರ್ ಬಸವರಾಜ್ ಪಿರ್ಯಾದಿ ಬಳಿ ನೀನು ಕೊಟ್ಟಿದ್ದು ಶಿರಸ್ತೇದಾರರಿಗೆ ಕೊಟ್ಟು ಪಹಣಿಗೆ ಸಹಿ ಮಾಡಿಸ್ತೀನಿ ನನಗೆ ನೀನು 2000/–ರೂಗಳನ್ನು ಕೊಡಬೇಕು ಅಂತ ಮತ್ತೆ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆಂದು. ಸದರಿ ಎರಡೂ ಘಟನೆಗಳನ್ನು ಪಿರ್ಯಾದಿ ಸ್ನೇಹಿತ ನವೀನ್ ಜಿ ರವರು ಅವರ ಮೊಬೈಲ್ ನಲ್ಲಿ ವಿಡಿಯೋ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಸದರಿ ಸಾಗರ ತಾಲ್ಲೂಕ್ ಕಛೇರಿಯ ದಾಖಲಾತಿ ವಿಭಾಗದ ಅಟೆಂಡರ್ ಬಸವರಾಜ್ ರವರ ವಿರುದ್ಧ ಈ ದಿವಸ ದಿನಾಂಕ:06/06/2024 ರಂದು ಪ್ರಕರಣ ದಾಖಲಾಗಿರುತ್ತದೆ. ಅದರಂತೆ ಈ ದಿವಸ ದಿನಾಂಕ:–06/06/2024 ರಂದು ಸಂಜೆ 4 ಗಂಟೆಗೆ ಅಪಾದಿತ ಬಸವರಾಜ್ ಜಿ ಬಿನ್ ಲೇಟ್ ಗುತ್ಯಪ್ಪ 57 ವರ್ಷ, ಅಟೆಂಡರ್, ಆರ್.ಆರ್.ಟಿ ಶಾಖೆ, ದಾಖಲಾತಿ ವಿಭಾಗ, ಸಾಗರ ತಾಲ್ಲೂಕ್ ಕಛೇರಿ, ಸಾಗರ ಇವರು ಅವರ ಕಛೇರಿಯಲ್ಲಿ ಪಿರ್ಯಾದುದಾರರಿಂದ ಲಂಚದ ಹಣ ರೂ.2000/– ಪಡೆದಿರುತ್ತಾರೆ ಈ ಸಮಯದಲ್ಲಿ ಟ್ರ್ಯಾಪ್ ಮಾಡಲಾಗಿರುತ್ತದೆ ಅಪಾದಿತರನ್ನು ಬಂದಿಸಿ ಮುಂದಿನ ತನಿಖೆಯನ್ನು ಶ್ರೀ ಹೆಚ್.ಎಸ್ ಸುರೇಶ್ ಪೊಲೀಸ್ ನಿರೀಕ್ಷಕರು, ಕ.ಲೋ ಶಿವಮೊಗ್ಗ ಇವರು ಕೈಗೊಂಡಿದ್ದು ಇರುತ್ತದೆ. ಕರ್ನಾಟಕ ಲೋಕಾಯುಕ್ತ ಶಿವಮೊಗ್ಗದ ಪೊಲೀಸ್ ಅಧೀಕ್ಷಕರಾದ ಶ್ರೀ ಮಂಜುನಾಥ್ ಚೌದರಿ ಎಂ.ಹೆಚ್. ಇವರ ಮಾರ್ಗದರ್ಶನದಲ್ಲಿ ಪ್ರಕರಣವನ್ನು ದಾಖಲಿಸಿ ಅಪಾದಿತನನ್ನು ಬಂದಿಸಲಾಗಿರುತ್ತದೆ. ಟ್ರ್ಯಾಪ್ ಕಾಲಕ್ಕೆ ಶಿವಮೊಗ್ಗ ಲೋಕಾಯುಕ್ತ ಕಛೇರಿಯ ಪೊಲೀಸ್ ಅಧಿಕಾರಿಗಳಾದ ಶ್ರೀ ಉಮೇಶ್ ಈಶ್ವರ ನಾ ನಾಯ್ಕ ಪೊಲೀಸ್ ಉಪಾಧೀಕ್ಷಕರು, ಕ.ಲೋ ಶಿವಮೊಗ್ಗ. ಸಿಬ್ಬಂದಿಗಳಾದ ಶ್ರೀ ಯೋಗೇಶ್ ಸಿ.ಹೆಚ್.ಸಿ. ಶ್ರೀ ಸುರೇಂದ್ರ ಹೆಚ್.ಜಿ .ಸಿ.ಹೆಚ್.ಸಿ. ಶ್ರೀ ಬಿ.ಟಿ ಚನ್ನೇಶ, ಸಿ.ಪಿ.ಸಿ ಶ್ರೀ ರಘುನಾಯ್ಕ ಸಿ.ಪಿ.ಸಿ. ಶ್ರೀಮತಿ ಪುಟ್ಟಮ್ಮ ಮ.ಪಿ.ಸಿ ಶ್ರೀ ಗಂಗಾಧರ ಎ.ಪಿ.ಸಿ ಶ್ರೀ ಪ್ರದೀಪ್ ಎ.ಪಿ.ಸಿ. ಶ್ರೀ ಜಯಂತ್ ಎ.ಪಿ.ಸಿ ಇವರುಗಳು ಹಾಜರಿದ್ದರು.

ವರದಿ: ರಾಘವೇಂದ್ರ ತಾಳಗುಪ್ಪ

Printed by : H.L.AMARANATH, Owned by: H.L.AMARANATH, Printed at : Sri Manjunatha Enterprises, No.30, Subbannachan lane, 1st Cross, Cottonpet, Bengaluru-560053
Published at : No.97, 2nd Cross, Vivekanandanagar, Khadi Commission Layout, BSK 3rd Stage, Kathariguppe Main Road, Bengaluru-560085. Mobile: 9663122276 Editor : H.L.AMARANATH